ಕೊರವಂಜಿ



Koravanji

ಸೆಪ್ಟೆಂಬರ್
೧೯೬೦

★

ಸಂಪಾದಕರು
ಶ್ರೀ|| ರಾ. ಶಿ.

ಬರಹಗಾರರು :

ಶ್ರೀ|| ಶ್ರೀರಂಗ

ಶ್ರೀ|| ಅ. ರಾ. ಸೇ.

ಶ್ರೀ|| ಪಾಪಿ

ಶ್ರೀ|| ಅರಾವರ್

ಶ್ರೀ|| ಕೇಫ

ಶ್ರೀ|| ರಾಮಿ

ಶ್ರೀ|| ಡೂಸು

ಶ್ರೀ|| ದಾಶರಥಿ ದೀಕ್ಷಿತ್

ಇತ್ಯಾದಿ, ಇತ್ಯಾದಿ.

ತಿಳಿನಗೆಯ ಮಾಸಪತ್ರಿಕೆ

ಬಿಡಿಪ್ರತಿ
[illegible]



ವೈಟೋಫೆರಿನ್

(ಆಧುನಿಕ ಶಕ್ತಿವರ್ಧಕ ಟಾನಿಕ್)


ಇದರಲ್ಲಿ "ಎ" "ಬಿ" ಮತ್ತು "ಡಿ" ಎಂಬ ವೈಟಮಿನ್ನುಗಳೂ ಐರನ್, ಕ್ಯಾಲ್ಸಿಯಂ ಮುಂತಾದ ಲೋಹ ವಿಶೇಷಗಳೂ, ಶುದ್ಧಗೊಳಿಸಿದ ತಾಮ್ರವೂ, ಮತ್ತು ಮಾಲ್ಟ್‌ಸಾರ, ಜೇನುತುಪ್ಪಗಳನ್ನು ಸೇರಿಸಿ ತಯಾರಿಸಿದ ಒಂದು ಅಮೃತಪಾನ. ಇದರಲ್ಲಿ ದೇಹಶಕ್ತಿಗೆ ಬೇಕಾದ ಸಕಲ ಔಷಧಗಳ ಸಮೂಹವೂ ಇದೆ. ಖಾಯಿಲೆಯಿಂದ ಎದ್ದವರಿಗೂ, ಬಸುರಿ ಬಾಣಂತಿಯರ ದೇಹದಾರ್ಢ್ಯಕ್ಕೂ ಇದು ಅತ್ಯುತ್ತಮವಾದ ಔಷಧ. ಸೇವಿಸಲು ಬಹಳ ರುಚಿಯಾಗಿಯೂ ಮತ್ತು ಮಧುರವಾಗಿಯೂ ಇದೆ.

★ ★

ತಯಾರಕರು:

ದಿ ಮೈಸೂರು ಇಂಡಸ್ಟ್ರಿಯಲ್ ಅಂಡ್ ಟೆಸ್ಟಿಂಗ್
ಲ್ಯಾಬೋರೇಟರಿ ಲಿಮಿಟೆಡ್,

ಮಲ್ಲೇಶ್ವರಂ - - - ಬೆಂಗಳೂರು 3.



ಸಂಪುಟ ೨೩ ಸೆಪ್ಟೆಂಬರ್ ೧೯೬೦ ಸಂಚಿಕೆ ೬

ಜೇಬುಗಳ್ಳನಿಗೆ—ಜಯವಾಗಲಿ!

ಬಸ್ಸಿಗಾಗಿ ಕಾದು ನಿಂತಿದ್ದೆ ; ನನ್ನ ಮುಂದೆ ಜನ, ಹಿಂದೆ ಜನ. ಆಶ್ಚರ್ಯದ ಮಾತೆಂದರೆ ಬೆಂಗಳೂರಿನಲ್ಲಿ ' ಕ್ಯೂಗಳು ' ಎರಡೂ ಕಡೆ ಬೆಳೆಯುವುವು. ಎರಡೂ ಕಡೆ ತಲೆಗಳಿದ್ದ ಯಾವುದೊ ಒಂದು ತರದ ಹಾವು ಇರುವುದಂತಲ್ಲ! ಹಾಗೆ. ನಾನು ನಿಂತದ್ದು ಒಂದು ' ಕ್ಯೂ ' ಎಂಬುದು ಮುಂದೆ-ಹಿಂದೆ ಎರಡೂ ದಂಡೆಗಳಿಗೆ ಜನ ಹೆಚ್ಚಾದಾಗ ನನಗೆ ತಿಳಿದುಬಂದಿತು. ಜನರ ಸಮ್ಮರ್ದಕ್ಕೆ ಹೆದರುವ ವೃತ್ತಿ ನನ್ನದು, ಹೊರಬೀಳಬೇಕು ಎಂದೆ. ಚಕ್ರವ್ಯೂಹದಲ್ಲಿ ಸಿಕ್ಕ ಅಭಿಮನ್ಯುವಿನಂತಾಯಿತು ನನ್ನ ಅವಸ್ಥೆ! ಒಳಗೆ ಉಳಿಯಲಾರೆ, ಹೊರಗೆಬರಲಾರೆ. ಯೋಚನೆಗೂ ಅವಕಾಶ ಸಿಕ್ಕಲಿಲ್ಲ. ಪುನರ್ಜನ್ಮಕ್ಕೆ ನಮ್ಮನ್ನು ಆಹುತಿಯನ್ನಾಗಿ ಮಾಡುವ ಪೂರ್ವಕರ್ಮದಂತೆ ' ಕ್ಯೂ ' ನನ್ನನ್ನೊಯ್ದು ಬಸ್ಸಿನ ಬಂಧನದಲ್ಲಿ ತೊಡಕಿಸಿತು. ಮೇಲೆ-ಕೆಳಗೆ ಯಾವ ಆಧಾರವೂ ಇಲ್ಲದೆ ಕೇವಲ ನೆರೆಹೊರೆಯುವರ ಆಧಾರದ ಮೇಲೆಯೆ ನಾನು ಸುರಕ್ಷಿತನಾಗಿ ನಿಂತಿದ್ದೆ. ಟಿಕೆಟ್ ಕೊಂಡುಕೊಂಡು ಸುರಕ್ಷಿತತೆಯನ್ನು ಇನ್ನಿಷ್ಟು ಭದ್ರ ಮಾಡಿಕೊಳ್ಳೋಣ ಎಂದು ಜೇಬಿಗೆ ಕೈಹಾಕಿದೆ, ಇಂದಿನ ನಮ್ಮ ರಾಜಕಾರಣಿಯ ತಲೆಯಂತೆ ಅದು ' ಬರಿದೊ ಬರಿದು ' !

ಬಸ್ಸಿನಲ್ಲಿ ಕುಳಿತ ಮೇಲೆ ಜೇಬಿನಲ್ಲಿ ಹಣವಿಲ್ಲ ಎಂಬುದನ್ನು ಕಂಡ ಅನುಭವ ನಿಮಗೆ ಬಂದಿದೆಯೊ ಇಲ್ಲವೊ! ಒಂದು ಕ್ಷಣದಲ್ಲಿ ಇಡೀ ಪ್ಯಾಸೆಂಜರ ಗುಂಪಿಗೆ

ನೀವು ನಾಯಕರಾಗುವಿರಿ. ಸಹೃದಯರಾದವರು ದುಃಸ್ಥಿತಿಯಲ್ಲಿ ನಾಯಕನು ಸಿಕ್ಕಿದ್ದಾನೆಂದು ಮರುಗುವರು, ಚುರುಕಾಗಿದ್ದವರು ನಾಯಕನು 'ವಿಲೆನ್' (Villain) ನನ್ನು ಹೇಗೆ ಹಣ್ಣು ಮಾಡುವನಲ್ಲ ಎಂದು ನಗೆಮೊಗದವರಾಗುವರು; ಇಲ್ಲಿ 'ವಿಲೆನ್' ಎಂದರೆ ಬಸ್ ಕಂಡಕ್ಟರ್ ಎಂದು ಬೇರೆ ಹೇಳಬೇಕಾಗಿಲ್ಲ. ಟಿಕೆಟ್ ಇಲ್ಲದೆ ಪ್ರಯಾಣ ಮಾಡಬಯಸುವ ಕುಯುಕ್ತಿ ನಿಮ್ಮದು, ಎಂದೆನ್ನುವನು ಅವನು; ಮನೆಯಲ್ಲಿ ಹಣವಿದೆ ಎಂದು ಅವನಿಗೆ ಹೇಳಿದರೆ 'ಹಾಗಿದ್ದರೆ ಮನೆಯಲ್ಲಿಯೆ ಉಳಿಯಬಹುದಿತ್ತಲ್ಲ, ಇಲ್ಲಿ ಬಂದು ನಮ್ಮನ್ನು ತೊಂದರೆ ಕೊಡುವುದಕ್ಕಿಂತ' ಎನ್ನುವನು; ಅಯ್ಯಾ, ನಾನು ಅಷ್ಟು ದರಿದ್ರನಲ್ಲ, ಬ್ಯಾಂಕಿನಲ್ಲಿಯೂ ಹಣವಿದೆ ಎಂದು ಅಭಿಮಾನ ಕೆರಳಿ ಹೇಳಿದರೆ 'ಅಷ್ಟೊಂದು ಐಶ್ವರ್ಯವಿದ್ದರೆ ಬ್ಯಾಂಕಿನ ಮೇಲೆ ಕುಳಿತೇ ಸವಾರಿ ಮಾಡಬಹುದಿತ್ತಲ್ಲ?' ಎನ್ನುವನು. ಅವನ ಈ ಮಾತಿಗೆ ನೀವು ನಗುವಂತೆ ಮಿಕ್ಕ ಪ್ರಯಾಣಿಕರೂ ನಗುವರು. ಕೊನೆಗೆ 'ಬಸ್ ಸ್ಟಾಪ್' ಎಂದು ಕೂಗಿ, ಬಸ್ಸನ್ನು ನಿಲ್ಲಿಸಿ 'ನಿಮ್ಮ ಆರು ನಯೇಪೈಸೇ ಉಳಿಯಿತೆಂದು ತಿಳಿಯಿರಿ, ಹುಂ!' ಎನ್ನುವನು. ಆ ಹುಂಕಾರದ ಫಲವಾಗಿ ನಾನು ಆಫೀಸ್ ಟೈಂಗೆ ಬಸ್ಸು ಎಂದೂ ನಿಲ್ಲದ ಒಂದು ಬಸ್ ಸ್ಟಾಪಿನಲ್ಲಿ ಇಳಿದು ಬಿಟ್ಟೆ. ನಾನು ಪ್ರತಿಯೊಂದು ಬಸ್ಸಿನಲ್ಲೂ ಹೀಗೇ ಮಾಡುತ್ತ ಮಾಡುತ್ತ ನನ್ನ ಪ್ರಯಾಣದ ಗುರಿಯನ್ನು ಮುಟ್ಟುವೆನೇನೊ ಎಂಬ ಮುಂದಾಲೋಚನೆಯಿಂದಲೆ ಕಂಡಕ್ಟರನು ಇಂತಹ ಸ್ಥಳದಲ್ಲಿ ನನ್ನನ್ನು ಇಳಿಸಿದನೆ, ಎಂದು ಕಂಡಕ್ಟರನಿಗಿಲ್ಲದ ಬುದ್ಧಿಮತ್ತೆಯನ್ನು ಪ್ರದರ್ಶಿಸಿ ನಾನು ಅವಮಾನಿತನಾದೆ.

ಹಾಂ! ಹೊಳೆಯಿತು! 'ಕ್ಯೂ'ದಲ್ಲಿ ನಿಂತಾಗ ಯಾವನೊ ಜೇಬುಗಳ್ಳನು ನನ್ನ ಪರ್ಸ್‌ನ್ನು ಎತ್ತಿದ್ದಾನೆ! ಮೊದಲು ದುಃಖ, ಆಮೇಲೆ ಸಂತೋಷ, ಕೊನೆಗೊಮ್ಮೆ ದುಃಖವಾಯಿತು. ನನ್ನ ಪರ್ಸನ್ನು ಕದ್ದನಲ್ಲ ಎಂದು ದುಃಖ, ಆದರೆ ಆ ಪರ್ಸಿನಲ್ಲಿ ಹೋಗಿ ಬರುವ ಮಟ್ಟಿಗೆ ಬೇಕಿದ್ದ ಬರೀ ಇಪ್ಪತ್ತೆರಡು ನಯೇಪೈಸೆ ಮಾತ್ರ ಇದ್ದುವೆಂದು ಸಂತೋಷ, ಕೊನೆಗೆ ಜೇಬುಗಳ್ಳತನ ಎಂಬ ಶ್ರೇಷ್ಠ ಕೈಚಳಕದ ತಲೆಯು ಇಪ್ಪತ್ತೆರಡು ನಯೆಪ್ಪೈಸೇಗಳಿಗಾಗಿ ವಿನಿಯೋಗವಾಗುತ್ತಿದೆಯಲ್ಲ ಎಂದು ದುಃಖ.

ತನ್ನ ಅನುಭವಗಳನ್ನು ಜಗತ್ತಿಗೆ ಅನ್ವಯಿಸಿ ತಿಳಿದುಕೊಳ್ಳುವವನು ಸಾಹಿತಿಯಾಗುವನು ಎಂದು ಬಲ್ಲವರು ಹೇಳುತ್ತಾರೆ, ನಾನೂ ಕೇಳಿದ್ದೇನೆ. ಈ ನನ್ನ ಅನುಭವವನ್ನು ದೇಶಕ್ಕೆ ಅನ್ವಯಿಸಿ ನಾನೂ ಯಾಕೆ ಸಾಹಿತಿಯಾಗಲು ಯತ್ನಿಸಬಾರದು ಎಂಬ ವಿಚಾರ ಬಂದಿತು. ತಡೆಯಿರಿ. ಹಾಗೆಂದರೆ ನಾನು ದೇಶಬಂಧುಗಳ ಜೇಬನ್ನು ಕತ್ತರಿಸಲು ಹೊರಟೆ ಎಂದು ತಿಳಿಯಬೇಡಿ. ನಾನು ವಿಶಾಲ

ಹೃದಯದಿಂದ ವಿಚಾರ ಮಾಡುತ್ತಿರುವೆ. ಮೊನ್ನೆ ಯಾವನೊ ಒಬ್ಬ ಬ್ಯಾಂಕಿನ ಗುಮಾಸ್ತೆ ತನ್ನ ಕಣ್ಣುಗಳಲ್ಲಿ ತಾನೆ ಮೆಣಸಿನ ಪುಡಿಯನ್ನು ಚಲ್ಲಿಕೊಂಡು, ಸಾವಿರ ರೂಪಾಯಿಗಳನ್ನು ತಾನು ಕಣ್ಣೊರೆಸಿಕೊಳ್ಳುವುದರಲ್ಲಿ ಒಯ್ದನು ಎಂದು ಪತ್ರಿಕೆಯಲ್ಲಿ ವರದಿಯಾದದ್ದನ್ನು ಓದಿದೆ. ಮುಂದೆ ಅವನ ಮನೆಯಲ್ಲಿಯೆ ಅವನ ಹೆಂಡತಿ, 'ಯಾರೋ ಮೆಣಸಿನ ಪುಡಿಯನ್ನು ತನ್ನ ಅಡುಗೆ ಮನೆಯಿಂದ ಕದ್ದಿದ್ದಾರೆ' ಎಂದು ನೆರೆಯಾಕೆಗೆ ಹೇಳಿದ್ದರ ಸುಳಿವು ಪೋಲೀಸರಿಗೆ ತಿಳಿಯಿತಂತೆ. ಇರಲಿ, ಮಹತ್ವದ ಮಾತೆಂದರೆ ಈ ಗುಮಾಸ್ತೆಯ ಚುರುಕು ಬುದ್ಧಿ. ಅದಕ್ಕೆ ಸರಿಯಾದ ಟ್ರೈನಿಂಗ್ ಸಿಕ್ಕಿದ್ದರೆ ಅವನು ಖಂಡಿತ ಆ ಸಾವಿರ ರೂಪಾಯಿಗಳನ್ನು ದಕ್ಕಿಸಿಕೊಂಡು 'ಜೇಬುಗಳ್ಳ'ನಾಗುತ್ತಿದ್ದ. ಟ್ರೈನಿಂಗ್ ಇಲ್ಲದ್ದಕ್ಕೆ ಅವನ ಬುದ್ಧಿಯು ವಿಫಲಕಾರ್ಯದಲ್ಲಿ ತೊಡಗುತ್ತಿದೆಯಲ್ಲ ಎಂದು ಯಾವ ದೇಶಾಭಿಮಾನಿಗಾದರೂ ದುಃಖವಾಗದಿರದು.

ಇತ್ತೀಚಿಗೆ ನಡೆದ 'ಪಲಾಯನ ಬ್ಯಾಂಕ್' ಪ್ರಕರಣವನ್ನು ತಾವು ಕೇಳಿರಬಹುದಷ್ಟೆ? ಸಾವಿರಾರು ಜನರ ಹಣವನ್ನು ಸದುಪಯೋಗ–ಸುರಕ್ಷಿತತೆ ಇವುಗಳ ನೆಪದಿಂದ ತೆಗೆದುಕೊಂಡು ಒಂದು ದಿನ 'ಪಲಾಯನ' ಹೇಳುವ ಈ ವೃತ್ತಿಗೆ ಯಶಸ್ಸು ದೊರೆಯಲಿಲ್ಲವಂತೆ. ಯಾರ ತಪ್ಪು? ಬ್ಯಾಂಕ್ ಡೈರೆಕ್ಟರರಿಗೆ ಈ ವಿದ್ಯೆಗೆ ಅಗತ್ಯವಿದ್ದ ಶಿಕ್ಷಣವನ್ನು ಕೊಡುವ ಸಂಸ್ಥೆಗಳೆ ಇಲ್ಲದಾಗ ಅವರಾದರೂ ಏನು ಮಾಡಬೇಕು?

ದೇಶಕ್ಕೆ ಪಂಚವಾರ್ಷಿಕ ಯೋಜನೆಗಳ ಸಂಬಂಧದಲ್ಲಿ ಪರದೇಶಗಳಿಂದ ನಾವು ಸಾಲವನ್ನು ತರುತ್ತೇವೆ. ಆದರೆ ನಮ್ಮ ದೇಶದಲ್ಲಿಯೆ ಬಡ್ಡಿ ಕೊಡದೆ, ಇಷ್ಟೇಕೆ? ಕೊಟ್ಟವನಿಗೆ ತಾನು ಕೊಟ್ಟಿರುವೆ ಎಂಬ ನೋವಿನ ಎಚ್ಚರ ಕೂಡ ಇರದಂತೆ ಹಣವನ್ನು ದೊರಕಿಸಬಲ್ಲವರು ಇರುವಾಗ ನಾವು ಪರದೇಶಗಳಿಂದ ಯಾಕೆ ಸಾಲವನ್ನು ತರಬೇಕು? ಇಂದು ಯಾರನ್ನು ನಾವು 'ಜೇಬುಗಳ್ಳ' ಎಂದು ದಂಡಿಸುವೆವೋ ಅವರನ್ನೇ ವಿಶೇಷಾಧಿಕಾರಿಗಳನ್ನಾಗಿ ನಿಯಮಿಸಿದ್ದಲ್ಲಿ ಯಾರ್‍ಯಾರು ಕರ ಕೊಡುವುದನ್ನು ತಪ್ಪಿಸುವರೊ ಅಂತಹ ಲಕ್ಷಾಧೀಶರಿಂದ ಖಂಡಿತವಾಗಿ ವಸೂಲಾಗಬಹುದಾಗಿದೆ. ಇಂದು ಸಕ್ಕರೆಯ ಮಾರಾಟದಲ್ಲಿಯ ದೃಷ್ಟಾಂತದಂತೆ ಕಳ್ಳಪೇಟೆಯಲ್ಲಿ ವ್ಯವಹಾರ ನಡೆಸುತ್ತಿರುವ ವರ್ತಕರಿಗಾಗಿ 'ಪಲಾಯನ ಬ್ಯಾಂಕು'ಗಳನ್ನು ಸ್ಥಾಪಿಸಬಹುದಲ್ಲ ಸರಕಾರವು? ಹಾಗೆ ನೋಡಿದರೆ, ಜೇಬುಗಳ್ಳತನದ ರಾಷ್ಟ್ರೀಕರಣ ಮಾಡುವುದೇ ಅಗತ್ಯವಿದೆ ಎಂದು ನನ್ನ ಅಭಿಪ್ರಾಯ. ಇಂದು ಅದು ಖಾಸಗಿ ಉದ್ದಿಮೆಯೂ ಆಗಿದೆ, ಸರಕಾರದ ವ್ಯವಸಾಯವೂ ಆಗಿದೆ. ಈ ಗೊಂದಲಕ್ಕಾಗಿ

ಇದರ ಲಾಭವು ದೇಶಕ್ಕೆ ದೊರೆಯದಂತಾಗಿದೆ. ಕೂಡಲೆ ಜೇಬುಗಳ್ಳತನದ ರಾಷ್ಟ್ರೀಕರಣವಾಗುವುದುತ್ತಮ.

ಇಂತಹ ಇಲಾಖೆಯನ್ನು ನಡೆಯಿಸಿಕೊಂಡು ಹೋಗಬಲ್ಲ ಸಮರ್ಥ ಅಧಿಕಾರಿಗಳಿದ್ದಾರೆಯೆ ಎಂದು ಯಾರಾದರೂ ಕೇಳಬಹುದು. ಕೇಳುವುದೇನೋ ಸಹಜವೆನ್ನಿ. ಯಾಕೆಂದರೆ ನಮ್ಮನ್ನು ಸುಲಿಯುವ ಬ್ರಿಟಿಷರು ಈ ಕಲೆಯಲ್ಲಿ ನಮ್ಮ ಎಂದರೆ ಭಾರತೀಯ ಆಡಳಿತಗಾರರಿಗೆ ಹೆಚ್ಚಿನ ಅವಕಾಶವನ್ನು ಕೊಟ್ಟಿದ್ದಿಲ್ಲ. ಆದರೂ ನಾವು ಹೆದರಬೇಕಾಗಿಲ್ಲ. ಸ್ವಾತಂತ್ರ್ಯೋತ್ತರದ ಈ ಹದಿನಾಲ್ಕು ವರ್ಷಗಳಲ್ಲಿ ಎಷ್ಟೋ ಆಡಳಿತಗಾರರು ಇದರಲ್ಲಿ ನುರಿತಿದ್ದಾರೆ; ರಾಜಕಾರಣಿಗಳಂತೂ ಇದರಲ್ಲಿ ಕೈ ಪಳಗಿದವರು. ಆದುದರಿಂದ ದಕ್ಷ ಮತ್ತು ಸಮರ್ಥ ಮೇಲಧಿಕಾರಿಗಳ ಅಭಾವವಾದೀತೆಂಬ ಹೆದರಿಕೆಯೆ ಅವಮಾನಕಾರಕವಾಗಿದೆ. ನೋಡಬಾರದೆ? ಸ್ವಾತಂತ್ರ್ಯದ ತರುವಾಯ ಕೇಂದ್ರದಲ್ಲಿ ಒಬ್ಬ ಅರ್ಥಮಂತ್ರಿಯೂ ಯಶಸ್ವಿಯಾಗಿ ತನ್ನ ಅರ್ಥ ಮಂತ್ರಿತನವನ್ನು ಪೂರ್ಣ ಅವಧಿಯವರೆಗೆ ಉಳಿಸಿಕೊಂಡಿಲ್ಲ. ಹೇಗೆ ಉಳಿಸಿಕೊಳ್ಳಬಲ್ಲನು? ಪಾಪ! ಆ ಯೋಗ್ಯತೆಯೆ ಅವನಿಗಿರುವುದಿಲ್ಲ. ಇನ್ನಾದರೂ ಈ ಸಂಕುಚಿತ ಭಾವನೆಯನ್ನೇ ಬಿಟ್ಟು, ಜೇಬುಗಳ್ಳತನವನ್ನು ಸರಿಯಾಗಿ ತಿಳಿದುಕೊಂಡು, ಅದರ ರಾಷ್ಟ್ರೀಕರಣ ಮಾಡಿ ಅದರಲ್ಲಿ ತಜ್ಞರಾದವರಲ್ಲಿ ಅತ್ಯಂತ ಮೇಧಾವಿಯನ್ನು ಅರ್ಥ ಮಂತ್ರಿಪದದಲ್ಲಿ ಕುಳ್ಳಿರಿಸಿ, ಕುಶಲಗಾರಿಕೆಯೆ ರಾಷ್ಟ್ರದ ನಿಜವಾದ ಸಂಪತ್ತು ಎಂಬುದನ್ನರಿತು ಆಲ್ ಇಂಡಿಯಾ ಪಿಕ್ ಪಾಕೆಟಿಂಗ್ ಟ್ರೈನಿಂಗ್ ಸೆಂಟರ್ ಒಂದನ್ನು ಸ್ಥಾಪಿಸುವ ದೃಢನಿರ್ಧಾರವನ್ನು, ಭಾರತದ ಭಾವೀ ಉನ್ನತಿಯ ದೃಷ್ಟಿಯಿಂದ ಮತ್ತು ಇಂದಿನ ಸ್ವಾತಂತ್ರ್ಯ ದಿನದ ಶುಭಮುಹೂರ್ತದಲ್ಲಿ ಮಾಡೋಣ.

ಜೇಬುಗಳ್ಳನಿಗೆ ಜಯವಾಗಲಿ!

—ಶ್ರೀರಂಗ

Koravanji, September, 1960

ಆಫ್ರಿಕನ್ ರೌಂಡಪ್

ಭಾರತದ ದಕ್ಷಿಣ ದಿಕ್ಕಿನಲ್ಲಿ ಸಿಂಹಳ ದ್ವೀಪವುಂಟು. ಅಲ್ಲಿಂದ ದಕ್ಷಿಣಕ್ಕೆ ಕೇವಲ ಎಂಟೇ ಎಂಟು ಡಿಗ್ರಿ ನಡೆದರೆ ಹಿಂದೂ ಮಹಾಸಾಗರದ ಮೊರೆವ ತೆರೆಗಳ ರಾಶಿಯಲ್ಲಿ ಪೂರ್ವ ಪಶ್ಚಿಮ ದಿಕ್ಕಿಗೆ ಹಬ್ಬಿರುವ ಒಂದು ಅವಿಚಲಿತ ರೇಖೆ ಕಾಣುವುದು ಅದರ ಮೇಲೆ ಬಹು ಸಣ್ಣ ಅಕ್ಷರದಲ್ಲಿ ಭೂಮಧ್ಯರೇಖೆ ಎಂದು ಬರೆದಿದೆ. ಅದನ್ನು ನೋಡಿ ಖಾತ್ರಿಪಡಿಸಿಕೊಂಡು ಪಶ್ಚಿಮಾಭಿಮುಖವಾಗಿ ನಡೆಯಿರಿ. ನೀವು ನೇರವಾಗಿ ಆಫ್ರಿಕಾ ಖಂಡವನ್ನು ತಲುಪುವಿರಿ. ಇದರ ಬಗೆಗೆ ತುಂಬಾ ಅಜ್ಞಾನವಿದ್ದುದರಿಂದಲೂ, ಅಲ್ಲಿ ತಾವು ಮಾಡುವ ಕರಾಳಕೃತಿಗಳು ಕತ್ತಲಲ್ಲೇ ಉಳಿವುವೆಂದೂ ಬಗೆದು ಅದನ್ನು ಬಿಳಿಯರು 'ಕಗ್ಗತ್ತಲೆಯ ಖಂಡ' ಎಂದು ಕರೆದರು. ಬೇಟೆಗಾರರ ಸ್ವರ್ಗ ಎಂಬುದು ಇದಕ್ಕೆ ಇರುವ ಇನ್ನೊಂದು ಹೆಸರು. ಏಕೆಂದರೆ ಇಲ್ಲಿ ಬಿಳಿಯರಿಗೆ ಸೊಗಸಾದ ಬೇಟೆ ಸಿಕ್ಕುತ್ತಿತ್ತು. ಅವರು ಆಫ್ರಿಕವನ್ನು ಮನಸೋ ಇಚ್ಛೆಯಿಂದ ಬೇಟೆಯಾಡುತ್ತಿದ್ದರು. ಈಗ ಮಂತ್ರ ತಿರುಮುರುವಾಗಿದೆ. ಆಫ್ರಿಕಾದ ಅಫರಾ-ತಫರಾ ಜಗತ್ತಿನ ಗಮನವನ್ನು ಸೆಳೆದಿದೆ.

ಆಫ್ರಿಕಾ ನಮಗೂ ಹೊಸದಲ್ಲ. ನಮ್ಮ ನಾಡಿನಲ್ಲಿ ಹೇರಳವಾಗಿ ಕಂಡು ಬರುವ ಫೇಂಡಾಮೃಗಗಳಿಗೆ ಆಫ್ರಿಕಾ ಒಂದು ತವರೂರು. ಆದುದರಿಂದ ಕನ್ನಡಿಗರಿಗೆ ಇದು ಹೊಸದೇಶವಾಗಿ ಕಾಣುವುದಿಲ್ಲ.

ಆಫ್ರಿಕಾಖಂಡ ಆರ್ಯರಿಗೆ ಹೊಸದಲ್ಲ. ' ಕರಾಳಜನಕ ಮಹರ್ಷಿ ಇಲ್ಲಿಯೇ ಕೆಲಕಾಲ ನೆಲೆಸಿದ್ದ. ಕಾಂಗೋ ಒಂದು ಪುಣ್ಯ ನದಿ. ಇದರ ದಡದ ಮೇಲೆ ಇರುವ ಕಬಿಬ್ಲಾ ಎಂಬ ಬುಡಕಟ್ಟಿನ ಜನರಲ್ಲಿ ನಮ್ಮ ಜನಾಂಗದವರಲ್ಲಿರುವ ಅನೇಕ ಗುಣ ತುಂಬಿವೆ. ಈ ಬುಡಕಟ್ಟಿನ ತಲೆಯಾಳು ಕವಾಟಯುವಾಟಿ; ವಯೋವೃದ್ಧ ಹಾಗೂ ಜ್ಞಾನವೃದ್ಧ. ಅವನ ಪ್ರೇಯಸಿಯ ಈ ಕವನವನ್ನು ಗಮನಿಸಿ.

ನಿನ್ನಂಗ ಕಾಂತಿಯೊಲು ಕಪ್ಪಾಗೆ ಯತ್ನಿಸಿವೆ
ಆಕಾಶ, ಸಾಗರ ಸಮೂಹಗಳು ; ಎನ್ನಿನಿಯ
ನಿನ್ನ ಕಣ್‌ಗುಡ್ಡೆಯೊಲು ಶೋಭಿಸಿದೆ ಕಾರಿರುಳು ;
ರವಿಮುಳುಗಿದನು ನಿನ್ನ ಕಂಡು ನಾಚಿ;
ನಿನ್ನ ಉಗ್ರತೆಯನೀಕ್ಷಿಸಿದ ನಾಐರೋಪ್ಯ
ಬೆದಬೆದರಿ ಭಯದಿಂದ ಬಿಳಿಚಿಕೊಂಡ,
ನಾನಿನ್ನ ಪ್ರೀತಿಸುವೆನೋ ಎನ್ನ ಗಂಡ!

ಆತನ ಜೀವನ ಕಾಲದಲ್ಲಿ ಅನೇಕ ಘಟನೆಗಳು ನಡೆದಿವೆ. ಪಾಶ್ಚಾತ್ಯರು ಎಂದರೆ, ಅವನಿಗೆ ಔತ್ತರೇಯರು. ನಾಗರೀಕರಣ (ಎಂದರೆ ಶೋಷಣೆ)ಕ್ಕಾಗಿ ಯತ್ನಿಸುವುದು ಅವನಿಗೆ ಹಿಡಿಸಿಲ್ಲ. ಆದರೂ ಅವನು ಮಾನವತಾವಾದಿ.

ನನ್ನ ಮನೆ ಕಾಡು—ನಿನ್ನ ಮನಕಾಡು
ನೀ, ನಿನ್ನ ಮನೆಗೋಡು—ಇದೆ ನನ್ನ ಹಾಡು-ಎಂಬ ಪದ್ಯ ಅವನದೇ.

ಭೌಗೋಳಿಕವಾಗಿ ಬಿಸಿ ಕಡಿಮೆ ಆದಂತೆ ರಾಜಕೀಯ ಬಿಸಿ ಏರುತ್ತಾ ಹೋಗುವುದು ಆಫ್ರಿಕದ ವೈಶಿಷ್ಟ್ಯ. ಉತ್ತರದ ಆಲ್ಜೀರಿಯಾ ಈಜಿಪ್ಟುಗಳ ಮತ್ತು ದಕ್ಷಿಣದ ದಕ್ಷಿಣ ಆಫ್ರಿಕಾದ ಬಿಸಿ, ಬ್ಲಾಸ್ಟ್ ಫರ್ನೇಸಿನ ಶಾಖಕ್ಕಿಂತ ೩೫೦ ಡಿಗ್ರಿ ಮಾತ್ರ ಹೆಚ್ಚು. ಅಲ್ಲಿಯ ಬಿಸಿ, ಕಂಡಕ್ಟ್, ಕನ್ವೆಕ್ಟ್ ಮತ್ತು ರೇಡಿಯೇಟ್ ಆಗಿ ಸಮಭಾಜಕ ವೃತ್ತದಕಡೆಗೆ ಧಾವಿಸುತ್ತಿವೆ. ಕೆನ್ಯಾ, ಸೆಂಟ್ರಾಫ್ರಿಕನ್ ರಿಪಬ್ಲಿಕ್, ಕಾಂಗೋ, ಕಟಾಂಗೋ ಮೊದಲಾದುವುಗಳು ಎರಡೆರಡು ಬಿಸಿಗಳಿಂದ ತಳಮಳಿಸುತ್ತಿವೆ.

ಕೆನ್ಯಾದಲ್ಲಿ ಮೌ ಮೌ ಫ್ಯಾಷನೇ ಹಳೆಯದಾಗಿದೆ. ಟಾಂಟಾಂ ಬೋಯಾ ಎಂಬುದು ಹೊಸ ಫ್ಯಾಷನ್. ಕೆನ್ಯಾಟ ಜನಪ್ರಿಯ; ಆದರೆ ನಾಯಕನಲ್ಲ. ಬೋಯಾ ನಾಯಕ, ಆದರೆ ಅಪ್ರಿಯ. ಬೆಸ್ಟಿಯಲ್ ಬ್ರೂಟಾಲಿಟಿ ಎಂಬ ಪಾಲಿಸಿ ಈ ದೇಶದ್ದು. ಅದರ ಜನಕರಲ್ಲೊಬ್ಬರಾದ ಸೆಲ್ವಿನ್ ಲಾಯ್ಡ್ ಕೆನ್ಯಾದ ಪ್ರಮುಖ ಸಮಸ್ಯೆಯಾಗಿ ಇತ್ತೀಚಿನವರೆಗೂ ಇದ್ದರು. ಈ ಸಮಸ್ಯೆ ಪರಿಹಾರವಾಯಿತು. ಆದರೆ ಅರ್ಲ್ ಆಫ್ ಹೋಂ ಎಂಬ ಸಮಸ್ಯೆ ಕ್ಷಿತಿಜದಲ್ಲಿ ಕಾಣಿಸುತ್ತಿದೆ.

ಬೆಲ್ಜಿಯನ್ನರು ಹಾರ್ಟ್ ಆಫ್ ಡಾರ್ಕ್‌ನೆಸ್ ಎಂಬ ಪಾಲಿಸಿಯನ್ನು, ಕಾಂಗೊಕ್ಕೆ ಸ್ವಾತಂತ್ರ್ಯ ನೀಡಿದ ಮೇಲೂ ಮುಂದುವರಿಸುತ್ತಿದಾರೆ. ಕಾಂಗೋ ಸ್ವತಂತ್ರವಾದಾಗ ಟೊಬ್ಯಾಕೋ ಪಾರ್ಟಿಯ ಕಸವಾಬು (ನೊಬುನೋಕೆ ಕಿಷಿಯಲ್ಲಿ) ಅಧ್ಯಕ್ಷತೆಯಲ್ಲಿ ಲುಮುಂಬ ಕಾಂಗೋ ಪ್ರಧಾನಿಯಾದರು. ಅವರ ಮೀಸೆ ಕಟಾಂಗಾ ಪ್ರಾಂತದ ಷೋಂಬೆಗೆ (ಸ್ವಾತಂತ್ರ್ಯ ಸಿಗುವವರೆಗೂ ಈತ ಸೋಂಭೇರಿ ಯಾಗಿದ್ದ) ಹಿಡಿಸಲಿಲ್ಲ. ‘ ಈಟಾಂಗ ಹಸುವಿನ ಹಾಲನ್ನು ಲುಮುಂಬನ ಕಟುಕರು ಕುಡಿಯದಿರಲಿ ’ ಎಂದು ಷೋಂಬೆ ಘೋಷಿಸಿದ. “ ಷೋಂಬೆಯ ಕಟುಕರು ಕಟಾಂಗ ಹಸುವನ್ನು ಕಡಿಯದಿರಲಿ” ಎಂದ ಲುಮುಂಬ ಮೀಸೆ ತಿರುವಿದ. ಡೆಟ್ ವೈಲರ್ ಎಂಬ ಬಂಡವಾಳ ಶಾಹಿಯೂ, ಕ್ರುಷೇವ್ ಎಂಬ ಕಮ್ಯುನಿಸ್ಟನೂ ಆ ಮೀಸೆಯಮೇಲೆ ನಿಂಬೆಹಣ್ಣು ಇಟ್ಟರು. ಷೋಂಬೆ ‘ who cares ! ’ ಎಂದ. ‘ ನಾನು ’ ಎಂದ ಕನಾಟ ಯುವಾಟಿ. ‘ ಯುದ್ಧವಾಗಲೇಬೇಕು ಕಟಾಂಗಕ್ಕಾಗಿ. ಆದರದು ಯೂರೋಪಿನಲ್ಲಿ ನಡಿಯಬೇಕು ’ ಎಂದ. ನಮಗೆ ಸಂಬಳ ಸಿಕ್ಕರೆ ಮೊದಲತಾರೀಖು ಯಾವಗತಿಯಾಗುತ್ತದೆಯೋ, ಆ ಗತಿ ಸಂಬಳ ಕೊಡುವಾಗ ಲುಮುಂಬನಿಗೆ ಮುಂದಿನತಿಂಗಳು.

ಸಮಭಾಜಕ ವೃತ್ತದಲ್ಲಿ ಹೀಗೆ. ಸಹಾರದಲ್ಲಿ ಇನ್ನೊಂದು ರೀತಿ ಇಲ್ಲಿ ನೀರಿನ ಮಳೆಯಿಲ್ಲ. ಆಟಂಬಾಂಬ್ ಮಳೆ ಸುರಿಯುತ್ತಿದೆ (ಡಿಗಾಲೇ ಕಿ ಜೈ!) ಕಾಡುಗಳಿಲ್ಲ ಆದರೆ ಕಾಪರ್ ಬೋಲ್ಟ್, ಫ್ರೆಂಚ್ ಸಹಾರ ಗಾಡ್ ನೋಸ್ ವಿಚ್ ಸಹಾರ, ಲಬೋ ಲಬೋ ಫೆಡರೇಷ್ನ ಎಂಬ ಓಯೆಸಿಸ್ಸುಗಳಿವೆ.

ಮೊರಾಕ್ಕೋವಿನಲ್ಲಿ ದಂಗೆ ಜೋರಾಗಿದೆ. ರಿಪೋರ್ಟ್ ಬಂದಿಲ್ಲ.

ಆಲ್ಜೀರಿಯದಲ್ಲಿ ಫ್ರೆಂಚರೆಂಬ ಬರ್ಬರರ ಸಮಸ್ಯೆ ವಿಕಟಿಸಿದೆ. ಆಲ್ಜೀರಿಯನ್ನರೆಂಬ ದಂಗೆಕೋರರು ಇಲ್ಲಿರುವರೆಂದು ಫ್ರಾನ್ಸಿನಲ್ಲಿ ಪ್ರತಿಪಾದನೆ ನಡೆದು ಹದಿನೆಂಟು ಮಂತ್ರಿಮಂಡಳ ಉರುಳಿದವು. ಇದು ನಮ್ಮ ಮನೆ ಎಂದು ಅಬ್ಬಾಸ್ ಆಲಿಬೇಗ್ ಎಂಬಾತನು ಹೇಳಿದ್ದರಿಂದ ನಸೇರರಿಗೆ ಖುಷಿಯಾಯ್ತು.

ಡೈನಮಿಕ್ ಅರಬ್‌ನ್ಯಾಷನಾಲಿಸಂ ಎಂಬುದು ಕ್ಲಿಯೋಪಾತ್ರಳ ತವರು ಮನೆಯಾದ ಈಜಿಪ್ಟಿನ ಮುಖ್ಯ ಪಾಲಿಸಿ. ಡೌನ್ ದಿ ಮಿಸಿಸಿಪಿ ಯೆಂಬಾತನು ಕಟ್ಟಿದ ಸೂಯೆಜ್ ನಾಲೆಯ ಆಶ್ರಯದಲ್ಲಿ ಕಬ್ಬು, ಭತ್ತ, ಮತ್ತು ಯುದ್ಧಗಳನ್ನು ಇಲ್ಲಿ ಬೆಳೆದು ಇಸ್ರೇಲಿಗೆ ಮಾರುತ್ತಾರೆ. ಅಹಿರಾವಣನಲ್ಲದಿದ್ದರೆ ಮಹಿರಾವಣ ಎಂಬ ಭಾರತೀಯ ತತ್ವ ಇಲ್ಲಿ ಫಲಕಾರಿಯಾಗಿಲ್ಲ. ಪತ್ರಿಕಾ ಸ್ವಾತಂತ್ರ್ಯವಾದಿಗಳು ಇಲ್ಲಿ ನೆಲೆಸಿದರೆ ಅದರ ಮಜಾ ಗೊತ್ತಾಗುತ್ತದೆ. ಎಥಿಯೋಪಿಯಾದಲ್ಲಿ ಹುಟ್ಟುವ, ಸೂಡಾನಿನಲ್ಲಿ ಹರಿಯುವ ನದಿಗೆ ರಷ್ಯದ ಸಹಾಯದಿಂದ, ಅಣೆ ಕಟ್ಟುವುದು ಇಲ್ಲಿನ ಹವ್ಯಾಸ.

ಅಬಿಸೀನಿಯಾ ಎಲ್ಲಿಯೋ ಭೂಗತವಾಗಿ ಎಥಿಯೋಪಿಯಾ ಅದನ್ನು ಮುಚ್ಚಿದ ಹಾಗೆ ಕಾಣುತ್ತದೆ. ಅಲ್ಲಿ ಸಮಸ್ಯೆಗಳಿಗೇನೂ ಬರಗಾಲವಿಲ್ಲ. ಕನ್ನಡದ ನವ್ಯ ಕವಿಯೊಬ್ಬ ಇಲ್ಲಿನ ಸಮಸ್ಯಾಮಾಲಿಕೆಗೆ ಈಚೆಗೆ ಸೇರಿದ ನಾಯಕ ರತ್ನ.

ಬಾಂಡುಗ್ ಸ್ಪಿರಿಟ್ಟನ್ನು ಚೀಣೀಯರು ಕುಡಿದಮೇಲೆ ಅದು ಸಾಲದಾಗಿ ಅಕ್ರಾಸ್ಪಿರಿಟ್ಟನ್ನು ಅದೇ formula ದಲ್ಲಿ ತಯಾರಿಸುತ್ತಿರುವ ದೇಶ ಘಾನಾ. ಗುಲಾಮರನ್ನು ಮಾರುತ್ತಿದ್ದ ಸ್ವತಂತ್ರ ರಾಷ್ಟ್ರ ಲೈಬೀರಿಯಾ. (ಇದರ ಮುಖ್ಯ ಮಂತ್ರಿ ಮನ್ರೋವಿಯಾ) ಆನೆಯ ಕೊಂಬನ್ನು ಮಾರಿಮಾರಿ ಸ್ವತಂತ್ರವಾದ ಐವರಿ ಕೋಸ್ಟ್‌ಗಳು ಪಕ್ಕದಲ್ಲೇ ಇದ್ದರೂ, ಘಾನಾದ ಘನತೆ ಹೆಚ್ಚುತ್ತಲೇ ಇದೆ. 'put me on the stamps' ಎಂಬ ಸಂದೇಶನೀಡಿದ, ಕ್ವಾಮೆ ನಕ್ರುಮಾ ಇದಕ್ಕೆ ಮೂಲಕಾರಣ. ಈತ ಭಾರತದ ಪರಮಮಿತ್ರ. ಪಂಚಶೀಲ ವೆಂದರೆ 'ಹಿಂದೀ ಚೀಣೀ ಭಾಯಿ ಭಾಯಿ' ಎಂದರ್ಥ ಎಂಬುದಾಗಿ ಭಾರತೀಯನೊಬ್ಬ ಹೇಳಿದಾಗ ಹಾಗಲ್ಲ 'ತಾವೇನ ನೆಸಗುತಿಹೆವೆಂದರಿಯದಿರ್ಪುದೇ ಪಂಚಶೀಲಂ' ಎಂದು ಈತ ಹೇಳಿದನೇ ಎಂಬುದು ಅಧಿಕೃತವಾಗಿ ಸ್ಪಷ್ಟವಾಗಿಲ್ಲ.

ಸೋಮಾಲಿಯ ಡಾಹೊಮೀ ಎಂಬ ರಿಪಬ್ಲಿಕ್‌ಗಳ ವಿಷಯ ಇನ್ನೂ ಪ್ರೈವೇಟಾಗಿ ಉಳಿದಿದೆ. ಜಾಂಜಿ ಬಾರಿನಲ್ಲಿ ಜೀರಿಗೆ, ಜಾಂಬೆಜಿಯಲ್ಲಿ ಸಾಂಬಾರು, ಅಂಗೋಲದ ರಂಗೋಲಿ, ಬಿಚುವಾಲ್ಯಾಂಡಿನಲ್ಲಿ 'ದಯಾರೇ ಪಾಪೀ, ಬಿಚುವಾ' ಎಂಬ ವಿಶೇಷ ವಸ್ತುಗಳಲ್ಲದೆ ಬಿಳಿಯರು, ಗೋರಿಲ್ಲಗಳು ಫೇಂಡಾ ಮೃಗಗಳು, ಸಿಂಹಗಳು ಮೊದಲಾದ ಮಾಮೂಲಿ ವಸ್ತುಗಳಿವೆ. ಟಾಂಗನಿಯಾಕದಲ್ಲಿ ಪ್ಯಾನ್ ಆಫ್ರಿಕನ್ ಕಾಂಗ್ರೆಸ್ ಇದೆ. ಇದರಲ್ಲಿ ಟಾ ಮೊಬಯ K. A. N. U. ಮೊದಲಾದುವುಗಳು ಕೆನ್ಯಾದಲ್ಲಿದ್ದಂತೆ ಇಲ್ಲ. ಬಿರುದೆಂತೆಂಬರಗಂಡ ಯುಗಾಂಡ ಮೊದಲಾದುವು ಇದರ ಸುತ್ತುಮುತ್ತು ಇವೆ. ಪಾಶ್ಚಾತ್ಯ ಪತ್ರಿಕಾಕರ್ತರು ತಮ್ಮ ಕಾಕದೃಷ್ಟಿ ಬೀರದ ಹೊರತು ಇಲ್ಲಿ ಭಾರಿಪ್ರಮಾಣದ ಏರುಪೇರುಗಳಾಗುವುದು ಪ್ರಪಂಚದ ಗಮನಕ್ಕೆ ಬರುವುದಿಲ್ಲ. ನಾಗರಿಕತೆ (ಶೋಷಣೆ) ಪ್ರಗತಿಹೊಂದುತ್ತದೆ.

'Chase a crooked shadow' ಎಂಬ ನಾಟಕ ನಡೆಯುತ್ತಿರುವುದು ರಾಜಕೀಯ ಶಾಖತಪ್ತವಾದ ದಕ್ಷಿಣ ಆಫ್ರಿಕನ್ ಯೂನಿಯನ್ನಿನಲ್ಲಿ. ಇದರಲ್ಲಿ ಡೈನಮಿಕ್ ಅಪಾರ್ಥೀಡ್ ಎಂಬುದೇ ಪಾಲಿಸಿ. ಇಲ್ಲಿ ಬಿಳಿಯರು, ಭಾರತೀಯರು ಮತ್ತು ಆಫ್ರಿಕನ್ನರೆಂಬ ಪರದೇಶಿಗಳು ವಾಸವಾಗಿದ್ದಾರೆ. ಮಹಾತ್ಮಾ ಗಾಂಧೀ ಜಿಯವರು ಇಲ್ಲಿಯೇ ಸ್ಮಟ್ಸ್ ಎಂಬಸಮಸ್ಯೆಗೆ ಪರಿಹಾರ ಕಂಡುಹಿಡಿದದ್ದು. ಆದರೆ ಆನಂತರದಲ್ಲಿ ಮಲ್ಯ, ಸ್ಟ್ರಿಡೋಂ ಎಂಬ ಭೂತಗಳೂ, ವೇರ್ ವರ್ಡ್ ಎಂಬ ಭೇತಾಳವೂ ಹುಟ್ಟಿದವು. ಕಿಂಬರ್ಲಿಯಲ್ಲಿ ವಜ್ರ ಪ್ರಿಟೋರಿಯದಲ್ಲಿ ಭಂಗಾರ, ಲಾಂಗಾ, ನಾಂಗಾ, ಜೊಹಾನ್ಸ್ ಬರ್ಗ್‌ಗಳಲ್ಲಿ ಕರಿಯರ ಮೂಳೆಯ ರಾಶಿಗಳು ಇವಕ್ಕಾಗಿ ಇದು ಪ್ರಸಿದ್ಧಿ. 'ಪಾಸ್ ಸುಟ್ಟರೆ ಗುಂಡು ಹಾರಿಸು' 'who cares? Not I' ಎಂಬ ಪ್ರಧಾನಿ ವೇರ್ವರ್ಡ್ ವಿರಹಿಯೊಬ್ಬನ ಗುಂಡಿಗೆ ತುತ್ತಾದ. ಆ ಆಧುನಿಕ ಯಕ್ಷ ಗುಂಡಿನಿಂದ ವೇರ್ವರ್ಡನನ್ನು ಹೊಡೆದು 'ಆ ಪೆರ್ಮಾತುಂ ಆ ಗಂಡುಮಾ ಸುಭಟಾಲಾಪಮುಂ ವೇರ್ವರ್ಡ ಇಂದೆಲ್ಲಿ ಪೊಕ್ಕಿರ್ದುದೋ' ಎಂದ. ಆದರೆ ತಲೆಗೆ ಹೊಡೆತ ಬಿದ್ದರೂ ಅವ ಬದುಕಿದುದ ರಿಂದ, ತಲೆ ಸರಿಯಾದ ಜಾಗದಲ್ಲಿಲ್ಲದವರ ಜೊತೆಗೆ ಕ್ರಿಕೆಟ್ ಆಡುವುದಿಲ್ಲ ಎಂದು ಷೆಪ್ಪರ್ಡ್ ಎಂಬಾತನು ಹೇಳಿ ಎಂ.ಸಿ.ಸಿ. ಡಿನ್ನರ್ ತಪ್ಪಿಸಿಕೊಂಡ.

ನಯಾಸಾಲ್ಯಾಂಡಿನ ಡಾ|| ಸಾಲೊಮನ್ ಭಂಡಾರಿ, ಆಫ್ರಿಕದ ಇನ್ನೊಬ್ಬ ಮಹದ್ವ್ಯಕ್ತಿ. ಹಾಲೀ ಖುಷಿಯಾಗಿದ್ದಾರೆ. ಆಗ್ನೇಯ ರ್‍ಹೊಡೇಷಿಯ, ಯುನೈಟೆಡ್ ಚಾಡ್, ಸದರ್ನಸ್ನೋಸ್ ಆಫ್ ಕಿಲಿಮಾಂಜರೋ ಇವೆಲ್ಲಾ ಸ್ವತಂತ್ರವಾದ ಮೇಲೆ ಟಿಂಬಕ್ಟೂವಿನಲ್ಲಿ ಬಹುಭಾಷಾಭ್ಯಾಸಕ್ಕೆ ಹಣವೊದಗಿಸುವ ಸಮಸ್ಯೆ ಆತನನ್ನು ಕಾಡುತ್ತಿದೆ. ಮಡಗಾಸ್ಕರ್ ಪ್ಯಾನ್ ಆಫ್ರಿಕನ್ ರಿಪಬ್ಲಿಕ್‌ನಿಂದ ಪ್ರತ್ಯೇಕವಾದಾಗ ಏನು ಮಾಡಬೇಕು, ದಿನಕ್ಕೆ ಎಷ್ಟು ರಾಷ್ಟ್ರಗಳು ಆಫ್ರಿಕಾದಲ್ಲಿ ಉದಯಿಸುತ್ತಿವೆ ಎಂದು ಸ್ವತಃ ಕವಾಟ ಯವಾಟಿಗೂ ತಿಳಿಯದು. ಕಾಂಗೋದ ತಂಟೆ (ಮೋತ್ಸಿ) ಟಂಗನಿಗೇಕೆ ಎಂದು ಆತ ಮೊನ್ನೆ ಕೇಳಿದನಂತೆ.

'ಡಿಸ್ಕವರಿ ಆಫ್ ಆಫ್ರಿಕಾ' ಎಂಬ ತನ್ನ ಉದ್ದ ಗ್ರಂಥದಲ್ಲಿ ಕವಾಟಾ ಹೀಗೆ ಬರೆದಿದ್ದಾನೆ. 'ಈ ವಿಶ್ವದಲ್ಲಿ ಸ್ವಾತಂತ್ರ್ಯ ಸಿಕ್ಕರೂ, ಇಲ್ಲದಿದ್ದರೂ, ಘರ್ಷಣೆ ಕಲಹ ತಪ್ಪವು. ಶಾಂತಿ ದೊರಕದು'. ಅಲ್ಲದೆ ಕರಾಳಜನಕನ ಗೋತ್ರೋದ್ಭವನಾದ ಈತನು ಐದಂಶಗಳ ಶಾಂತಿ ಸೂತ್ರವನ್ನು ನೀಡಿದ್ದಾನೆ.

1) ಒಂದು ಶತಮಾನ ಕಾಲ ಆಫ್ರಿಕಾದಲ್ಲಿ ಐರೋಪ್ಯರ ರಾಜಕೀಯದ ರದ್ದಿಯಾತಿ 2) ಚೀಣಾ, ಬೆಲ್ಜಿಯಂ, ಮೊದಲಾದ ಆಕ್ರಮಣಕಾರೀ ರಾಷ್ಟ್ರಗಳ ನೆಲದಲ್ಲಿ ಆಫ್ರಿಕಕ್ಕಾಗಿ ಯುದ್ಧ 3) ಆಫ್ರಿಕಾದ ಬೇಟೆಗಾರರಿಗೆ ನರಕ 4) ಮರಳಿ ಅನಾಗರಿಕತೆಗಾಗಿ ವನರಾಜ್ಯ ಸ್ಥಾಪನೆ 5) ಓಂ ಶಾಂತಿಃ ಶಾಂತಿಃ ಶಾಂತಿಃ. . . . .

—ಅ. ರಾ. ಸೇ.

ನವ್ಯ ಪುರಾಣಿ ಕಥೆ

ಹೆಬ್ಬಿ ಗುಬ್ಬಾಲೆಯ ಸಾಹುಕಾರರು ಸತ್ತಾಗ ಸಂತೋಷಪಟ್ಟವರು ಇಬ್ಬರು. ಬದುಕಿದ್ದ ಮೂರನೆಯ ಹೆಂಡತಿ ಮತ್ತು ಅವಳ ಮಗ ಹದಿನಾರು ವರ್ಷದ ಘೋಂಡೂ. ಶುಭ ಸ್ವೀಕಾರ ಆದ ಮೇಲೆ, ವಿಮೆ ಮಾಡಿದ ಹಣವೆಲ್ಲಾ ಬಂದ ಮೇಲೆ, ತಾಯಿ ಮಗ ಇಬ್ಬರೂ ಬೆಂಗಳೂರು ನೋಡುಕ್ಕೆ ಅಂತ ಹೊರಟು ಬಂದರು.

ಊರನ್ನೆಲ್ಲಾ ಆಟೋರಿಕ್ಷಾದಲ್ಲಿ ಸುತ್ತಿನೋಡಿದರು.

ಎರಡನೇ ದಿನದ ಸಂಜೆ, ಹಿಂದಿನ ಕಾಲದಲ್ಲಿ ಛತ್ರ ಎಂದು ಕರೆಸುಕೊಳ್ಳು ತ್ತಿದ್ದ ಈಗ ಹಣ ಕಸಿದುಕೊಂಡು ಹೊಟಲು ಎಂದು ಹೆಸರಿರುವ, ತಾವು ಇಳಿದು ಕೊಂಡಿದ್ದ ಸ್ಥಳಕ್ಕೆ ಬಂದು ಸೇರಿದಾಗ, ಏಳುಗಂಟೆ ಎಣಿಸುತ್ತಿತ್ತು, ಜೈಲಿನ ಗಡಿಯಾರ !

ಅಮ್ಮನಿಗೆ ಮಗ ಹೇಳಿದ.

" ಬೆಂಗಳೂರ್ನ ಇನ್ನೂ ಕಟ್ತಾ ಇದಾರೆ. ರಸ್ತೆಗಳನ್ನು ಹಾಕ್ತಾ ಇದಾರೆ. ಇದೆಲ್ಲಾ ಮುಗಿದು ಊರು ಆದ ಮೇಲೆ ಬಂದು ನೋಡೋಣ " ಎಂದು.

ಸೊಂಟದ ಮೇಲೆ ಕೈಯಿಟುಕೊಂಡು ಆಟೋರಿಕ್ಷಾದ ನೋವನ್ನು ಹೋಗ ಲಾಡಿಸಲು ಅಮ್ಮ ಮಾಲೀಷು ಮಾಡಿಕೊಳ್ಳುತ್ತಾ ಉತ್ತರಿಸಿದಳು :

" ನಾಳೆ ಬೆಳಿಗ್ಗೇನೇ ಮಗು ನಮ್ಮ ಊರಿಗೆ ಹೊರಟುಹೋಗೋಣ. ಆದರೆ ಹತ್ತು ದಿವಸದ ಮುಂಗಡ ಹಣ ಹೋಟಲಿಗೆ ಕೊಟ್ಟಿದ್ದೇವೆ, ಇಬ್ಬರಿಗೆ ಅಂತಾ ! ಅದು ಪೋಲಾಗಬಾರದು ನಾಳೆ ಬೆಳಿಗ್ಗೆ ನೀನು ಊರಿಗೆ ಹೋಗು. ನಾನು ಇಪ್ಪತ್ತು ದಿನ ಇಲ್ಲೇ ಇದ್ದು ಮುಂಗಡದ ಹಣವನ್ನು ಖರ್ಚ ಪೂರೈಸಿ ಬರುತ್ತೇನೆ. ಕೊಠಡಿಗೆ ಊಟ ತಂದುಕೊಡುವ ಹುಡುಗ ಹೇಳಿದ ಈ ಹೋಟಲಲ್ಲಿ ಮುಂಗಡದ ಹಣ ಹಿಂದಕ್ಕೆ ಕೊಡುವುದಿಲ್ಲ ಅಂತ. ಅದಕ್ಕೇ ಈ ಉಪಾಯ ಅಂತ.

ಹೆಬ್ಬಿಗುಬ್ಬಾಲೆಯ ತೆಂಗಿನತೋಟದ ಭಾವಿ ಪಕ್ಕದ ಗುಡಿಸಲಿನಲ್ಲಿದ್ದ ನಂಜೀನ ಜ್ಞಾಪಿಸಿಕೊಂಡು ಮಗ ' ಹ್ಞೂ ಅಮ್ಮ ' ಅಂತ ಹೇಳಿ ಮಾರನೆ ಬೆಳಿಗ್ಗೆ ತನ್ನೂರಿಗೆ ಹೊರಟ.

ಅಮ್ಮಾ ಷಹರ ಪಾಲಾದಳು, ಮಗ ತೋಟದ ಪಾಲಾದ, ಕತೆ ಕಾಡಿಗೆ ಹೋಯಿತು. ಊರ ನಲ್ಲಿ ಬತ್ತಿಹೋಯಿತು, ಮಳೆ ಬರದಿದ್ದುದರಿಂದ.

"ಗೋವಿ ಕಥೆ"

ಎದೆ ಸೀಳಿದರೆ ಎರಡು ಅಕ್ಷರ ಇತ್ತಿಲ್ಲ ಗೋವಿಗೆ. ಅದಕ್ಕೇ ಅವನು ಬಸ್ ನಿಲ್ದಾಣದಲ್ಲಿ ಸಾಮಾನು ಹೊರುವ ಕೆಲಸ ಮಾಡಿಕೊಂಡು ಸುಖವಾಗಿರುತ್ತಿದ್ದ. ಸಂಜೆಮುಂದೆ ಏನಿಲ್ಲ ಅಂದರೂ ನೂರು ನಯೆ ಪೈಸೆ ನೂರೈವತ್ತು ನಯೆ ಪೈಸೆ ಎಣಿಸಿಕೊಂಡು ಸಂತೋಷ ಪಡುತ್ತಿದ್ದ. ಹಿಂದಿನ ಕಾಲದಲ್ಲಿ ಎರಡು ಪಾವಲಿ ಮುಕ್ಕಾಲು ರೂಪಾಯಿ, ಒಂದುಕಾಲು ದೀಡು ರೂಪಾಯಿ ಹೀಗೆ ಲೆಕ್ಕಾ ಹಾಕುತ್ತಾ ಇದ್ದವನು ಹೊಸ ಲೆಕ್ಕ ಬಂದಮೇಲೆ ಐವತ್ತು ನೂರು ನೂರೈವತ್ತು ಸಂಪಾದಿಸಿದೆ ಎಂದು ಸಂತೋಷಪಡುತ್ತಿದ್ದ.

ಮೊದಲು ನಾಲ್ಕು ಭಕ್ರಿತಿಂದು ತೇಗ್ತಾ ಇದ್ದೋನು ಈಗ ಸಂಪಾದಿಸಿದ ಹಣದಲ್ಲಿ ಎರಡೇ ಭಕ್ರಿ ಕೊಳ್ಳೋಹಾಗಿದ್ದರೂ ಸಂತೋಷಪಡ್ತಾನೇ ಇದ್ದ.

ಸಂತೋಷ ಪಡೋರನ್ನು ಕಂಡರೆ ದೇವರಿಗೆ ಹೊಟ್ಟೆ ಉರಿ ಅಂತ ಕಾಣುತ್ತೆ ಟಾಂಗ್ ಕೊಟ್ಟು ಬೀಳಿಸ್ತಾನೆ!

ಬಸ್ ಛಾವಣಿಯಿಂದ ಟ್ರಂಕ್ ಇಳಿಸಿಕೊಡುತ್ತಿದ್ದಾಗ ಟ್ರಂಕು ಜಾರಿತು. ಗೋವಿ ಕೆಳಗೆ ನಿಂತು ಇಸುಕೊಳ್ತಿದ್ದ. ಅವನ ಎದೆಮೇಲೆ ಸರಿಯಾಗಿ ಟ್ರಂಕು ಜಾರಿ ಬಿತ್ತು. ಅದರ ಮೂಲೆ ಅಂಚೇ ಮೊದಲು ಬಿತ್ತು. ಚರ್ಮ ಹರಿಯಿತು ಮಾಂಸ ತುಂಡಾಯ್ತು. ಮೂಳೆ ಕಾಣಿಸೋ ಹಾಗಾಯ್ತು ಅವ ಮೂರ್ಛೆ ಹೋದ. ಟ್ರಂಕು ರಕ್ತದಿಂದ ತೋಯ್ದಿತ್ತು.

ಬಸ್ ಡ್ರೈವರು ಬೇಗ "ಪ್ರಥಮ ಚಿಕಿತ್ಸೆಯ" ಪೆಟ್ಟಿಗೆ ತೆಗೆದ. ಅದರಲ್ಲಿ ಐಯೊಡಿನ್ ಒಂದೇ ಇದ್ದುದು. ಅದನ್ನೇ ಧಾರಾಳವಾಗಿ ಗಾಯಕ್ಕೆ ಹಚ್ಚಿದ. "ಅಯ್ಯಯ್ಯಪ್ಪೋ!" ಎಂದು ಚೀತ್ಕಾರ ಕೇಳಿಸಿತು. ಬಸ್ ನಡುಗಿತು.

ಗೋವಿ ಎದ್ದುಕೂತು ಬೋಲಬೋಲ ಮಾಡಿದ. ಉರಿ ನೋವು ಎಂದು ಬೊಬ್ಬೆ ಇಟ್ಟ. ಕಾಫಿ ತರಿಸಿ ಕುಡಿಸಿ ಬಾಯಿ ಬೀಡಿ ಇಟ್ಟು ಹಚ್ಚಿದಮೇಲೆ ಅವನು ಬೊಬ್ಬೆಕಡಿಮೆ ಮಾಡಿದ್ದು. ಅದೇ ಬಸ್ಸಿನಲ್ಲಿ ಅವನನ್ನು ಕೂರಿಸಿಕೊಂಡು ಬೆಳಗಾಂನಲ್ಲಿರುವ ದೊಡ್ಡ ದವಾಖಾನೆಗೆ ಕರೆದುಕೊಂಡು ಹೋದರು. ಅಲ್ಲಿ ಚಿಕಿತ್ಸೆಪಡೆಯುತ್ತ ಮೂರು ತಿಂಗಳು ಇದ್ದ. ಗಾಯಮಾಗಿತು. ಆದರೆ ಎದೆ ಮೇಲೆ

ಮಧ್ಯದಲ್ಲಿ ಚರ್ಮ ವಾಗುತ್ತಾ ಬಂದಹಾಗೆಲ್ಲಾ ಗಂಟುಕಟ್ಟಿಕೊಂಡಿತು. ಕಡೆಗೆ ಚರ್ಮದ ಗಂಟೂ ಬೆಳೆಯುತ್ತಾ ಬಂತು. ವಕ್ರವಕ್ರವಾಗಿ ಬೆಳೆಯಿತು.

ಆಸ್ಪತ್ರೆಯಿಂದ ಹಿಂದಕ್ಕೆ ಕಳಿಸುವ ಸಂಜಿಮುಂದೆ ಡಾಕ್ಟರು ಪರೀಕ್ಷೆಮಾಡಿ ಹೇಳಿದರು: ಎಲ್ಲಾ ವಾಸಿಯಾಗಿದೆ. ಹೋಗಬಹುದು. ಆದರೆ ಚರ್ಮದಗಂಟು ಸ್ವಲ್ಪ ನವೆ ಕೊಡುತ್ತೆ ಅಭ್ಯಾಸವಾದರೆ ಅದೂ ಸರಿಹೋಗುತ್ತೆ.

ನೋಡುಕ್ಕೇನೋ ಗಂಟು ಅವಲಕ್ಷಣ. ಆದರೆ ನಿನ್ನ ಎದೆಮೇಲೆ ಇದು ಗಂಟ್ಟಿಕ್ಕಿರೋದು ಸಾಕ್ಷಾತ್ ಗಣಪತಿಯ ಮೂರ್ತಿಯ ಹಾಗೆಯೇ ಇದೆ. ಬೇಕಾದರೆ ಕನ್ನಡಿಯಲ್ಲಿ ನೋಡಿಕೋ ! ನಿನ್ನ ಎದೆಮೇಲೆ ದೇವರು ಬಂದು ಪ್ರತ್ಯಕ್ಷವಾಗಿದಾನೆ ಎಂದು ಹಾಸ್ಯಮಾಡುತ್ತಾ ಹೇಳಿದರು.

ಆಸ್ಪತ್ರೆಯ ಜವಾನ ಇದನ್ನು ಕೇಳಿಸಿಕೊಂಡ. ಅವನೂ ನೋಡಿದ ಗೋವಿ ಎದೆ ಮೇಲೆ ಗಣಪತಿಯ ಸಾಕ್ಷಾತ್ ಉದ್ಭವ ಮೂರ್ತಿ !! ಯಾರಿಗೂ ಕಾಣದ ಹಾಗೆ ಕೆನ್ನೆ ಕೆನ್ನೆ ತಪ್ಪು ಹೊಡೆದುಕೊಂಡ.

ಗೋವಿ ಯಥಾಪ್ರಕಾರ ಬಸ್ ನಿಲ್ದಾಣದ ಹತ್ತಿರಕ್ಕೆ ಅರಿವೆ ಹೊದ್ದುಕೊಂಡು ಹೋದ ಅಲ್ಲೇ ಕುಳಿತಿದ್ದ. ಆಸ್ಪತ್ರೆ ಕೆಲಸ ಮುಗಿಸಿಕೊಂಡು ಜವಾನ ಮನೆಗೆ ಹೋಗುತ್ತಿದ್ದಾಗ ಬಸ್ ನಿಲ್ದಾಣದ ಹತ್ತಿರ ·ಗೋವಿಯನ್ನು ಕಂಡ. ಹತ್ತಿರ ಹೋದ.ಅಡ್ಡಬಿದ್ದ.“ದೇವರು ನಿಮ್ಮ ಮ್ಯಾಗೆ ಬಂದಾನ್ರೀ! ನೀವು ಮಹಾತ್ಮ ರ್‍ರೀ!” ಅಂದ ಜನವೆಲ್ಲಾ ಗುಂಪು ಸೇರಿದರು ಏನು ಎತ್ತ ಎಂದೆಲ್ಲಾ ಕೇಳಿದರು. ಆಸ್ಪತ್ರೆ ಜವಾನ ಎಲ್ಲವನ್ನು ವಿಶದವಾಗಿ ಹೇಳಿದ. ಎದೆ ಮೇಲಿನ ಅರಿವೆಯನ್ನು ಗೋವಿ ತೆಗೆಯಲೇ ಬೇಕಾಯ್ತು.

ಮಸು ಬೆಳಕಿನಲ್ಲಿ ಎದೆ ಮೇಲೆ ಗಣಪತಿಯ ವಿಗ್ರಹ ಸ್ಫುಟವಾಗಿ ಕಾಣುತ್ತಿತ್ತು ಜನರೆಲ್ಲಾ ಅಡ್ಡಬಿದ್ದರು ಹಣ್ಣುಕಾಯಿತಂದು ಇಟ್ಟು ಪೂಜಿಸಿದರು ಕೆಲವರು ಊದುಕಡ್ಡಿ ಹಚ್ಚಿಟ್ಟು ಕರ್ಪೂರದಾರತಿ ಎತ್ತಿದರು. ರೂಪಾಯಿ ರೂಪಾಯಿ ನಾಣ್ಯ ಗಳನ್ನೇ ಅರ್ಪಿಸಿದರು. ಬಿಸಿ ಬಾದಾಮಿಹಾಲು ತಂದುಕೊಟ್ಟರು ಕೆಲವರು.

ಗೋವೀಗೆ ಇದೊಂದೂ ಅರ್ಥವಾಗಲಿಲ್ಲ. ಮೊದಲೇ ಮಂಕ. ಈಗ ಮರುಳ ನಂತೆಕೂತ. ಆದರೂ ತುಟಿಯ ಛಟ ಸೊಂಟದಿಂದ ಬೀಡಿಒಂದನ್ನು ತೆಗೆದು ಬಾಯಿಗಿಟ್ಟುಕೊಂಡ. ಇದನ್ನು ಕಂಡ ಒಬ್ಬ ತಕ್ಷಣ ಬೀಡಿ ತುದಿಗೆ ಬೆಂಕಿ ಹತ್ತಿಸಿ ಕೈಮುಗಿದ.

ಅವತ್ತಿನಿಂದ ಗೋವಿಗೆ ದೆಸೆ ಶುರುವಾಯ್ತು. ಸುಂಟರಗಾಳಿ ಬೀಸಿದಂತೆ ಅವನ ಕೀರ್ತಿ ಹರಡಿತು. ಊರೂರಿಂದಲ್ಲಾ ಜನ ಸಂಸಾರ ಸಮೇತಬಂದು ಪೂಜೆಮಾಡಿ ಹರಕೆ ಒಪ್ಪಿಸಿ ಹೋಗುತ್ತಿದ್ದರು.

* * * *

ಮಹಾತ್ಮನೊಬ್ಬನ ಮೇಲೆ ಗಣೇಶನು ಪ್ರತ್ಯಕ್ಷವಾಗಿ ಉದ್ಭವಿಸಿರುವನೆಂಬ ಸುದ್ದಿ. ಊರಿಗೂ ಬಂತು ಅಲ್ಲಿ ನೆರಳುತ್ತಿದ್ದ ಕಾಟಂಕರರು, ಗೂಳರ್ಜರು, ಗಟ್ಟಿಗೆಯವರು ಇವರು ಮೂವರೂ ಬೆಳಗಾಂವಿಗೆ ಬಂದರು ಬಸ್ ನಿಲ್ದಾಣಕ್ಕೆ ಹೋದರು ಈ ವೇಳೆಗೆ ಅಲ್ಲಿ ಸಣ್ಣ ಆಶ್ರಮುವೇ ಬೆಳೆದು ಬಂದಿತ್ತು. ಗೋವಿಯನ್ನು ನೋಡಿದರು. ಅವನ ಎದೆ ನೋಡಿದರು. ಗಣೇಶನನ್ನು ಕಂಡರು. ಸಾಷ್ಟಾಂಗ ಬಿದ್ದರು.

"ಸ್ವಾಮಿಜೀ! ನೀವು ನಮ್ಮೂರಿನಲ್ಲಿ ಬಸ್ ನಿಲ್ದಾಣದಲ್ಲಿ ಇರುತ್ತಿದ್ದಿರಲ್ಲವೇ" ಎಂದರು. ಹ್ಞೂ ಎನ್ನುವಂತೆ ಸ್ವಾಮಿಜಿಯು ತಲೆದೂಗಿದರು.

"ನಿಮ್ಮ ಎದೆ ಮೇಲೆ ಅಲ್ಲವೇ ಟ್ರಂಕು ಬಿದ್ದಿದ್ದು" ಎಂದು ಕೇಳಿದರು ಕೋಲೆಬಸವನ ತರಹ ಗೋವಿ ತಲೆಯಾಡಿದ.

"ಅಂದಮೇಲೆ ನಮ್ಮೂರಿನಲ್ಲೇ ದೇವರು ನಿಮ್ಮಮೇಲೆ ಪ್ರತ್ಯಕ್ಷವಾಗಲು ಶುರುವಾಗಿದ್ದು" ಎಂದು ಹರ್ಷದಿಂದ ಮೂವರೂ ಉದ್ಗಾರ ತೆಗೆದರು.

ಗೋವಿ ಇನ್ನೂ ತಲೆಯಾಡಿಸುತ್ತಲೇ ಇದ್ದ.

ದೇವರು ಪ್ರತ್ಯಕ್ಷವಾದ ಊರಿಗೇ ತಾವು ಬಂದು ಆಶ್ರಮ ಕಟ್ಟಿಕೊಂಡಿರಬೇಕು ಎಲ್ಲಾ ಖರ್ಚವೆಚ್ಚಗಳನ್ನೂ ನಾವು ಕೊಡುವವರಿದ್ದೇವೆ ಎಂದರು ಆ ಮೂವರು.

ಇದನ್ನೆಲ್ಲಾ ಬೆಳಗಾವಿಯ ಭಕ್ತರೆಲ್ಲ ಕೇಳಿದರು.

ಅಲ್ಲಿ ಗಾಯುವಾಯ್ತು, ಗೂನೆಯಾಯ್ತು ಅಷ್ಟೇ! ಆದರೆ ಬೇನೆತಾಪಕೊಟ್ಟು ದೇವರು ಪ್ರತ್ಯಕ್ಷವಾಗಿ ಉದ್ಭವಿಸಿದ್ದು ಬೆಳಗಾಂವಿಯಲ್ಲಿ. ಇಲ್ಲೇ ಇರಬೇಕು ಗುರುಗಳು, ಎಂದು ಬೆಳಗಾಂವಿಯ ಭಕ್ತರು ಹಠಹಿಡಿದರು.

ಗೋವಿ ಬಾಯಿತೆರೆದು ಏನನ್ನು ಅನ್ನಲಿಲ್ಲ. ಭಕ್ತಾದಿಗಳ ಜಗಳ ಅವನನ್ನು ತಾಕಲೇ ಇಲ್ಲ. ಬೆವರುಸುರಿದು ದುಡಿದರೂ ನಯಾಪೈಸೇಗಳಲ್ಲಿ ನೂರು ಕಾಣುವುದು ಕಷ್ಟವಾಗಿದ್ದ ಅವನಿಗೆ ಈಗ ಕೂತಲ್ಲೇ ಸುಖ ಭೋಜನಹಾಕಿ ಎದುರಿಗೆ ಸಾವಿರಾರು ರೂಪಾಯಿಗಳ ಸುರಿಮಳೆ ಬೀಳುವುದು ಬಲು ಹಿತವಾಗಿತ್ತು.

ಇರಬೇಕು ಇದರಲ್ಲೆಲ್ಲೋ ದೇವರ ಕೈವಾಡ. ಅವ ನನ್ನ ಹತ್ತಿರ ಬಂದಿರಲೇಬೇಕು ಇಲ್ಲದೆ ಇದ್ದರೆ ಇದೆಲ್ಲಾ ಹೇಗೆ ಸಾಧ್ಯ ಎಂದೇ ಅವನ ಅರೆ ತಿಳಿವಳಿಕೆಯ ಮನಸ್ಸಿಗೆ ಅನ್ನಿಸಿತ್ತು. ಮೌನವಾಗಿಯೇ ಇದ್ದ ಬೆಳಗಾಂವಿಯ ಭಕ್ತರೆದುರಿಗೆ........ ಮೂವರು ಮಠಾಠಿಗಳ ಹಠಸಾಗಲಿಲ್ಲ. ಅದಕ್ಕೇ ಅವರು ತಮ್ಮೂರಿಗೆ ಹೋಗಿ ದೊಡ್ಡ ಚಳುವಳಿಯನ್ನೇ ಹೂಡಿದರು. "ಬೆಳಗಾಂವಿ ಮಹಾರಾಷ್ಟ್ರಕ್ಕೆ ಸೇರಬೇಕು ದೀಡ್ ತಿಂಗಳಲ್ಲಿ ಆಗದಿದ್ದರೆ ಅಗಧಿ ಭಯಂಕರ ಚಳುವಳಿ ಹೂಡಲೇಬೇಕಾಗುತ್ತೆ. ದೇಶಾದ್ಯಂತ ಕರನಿರಾಕರಣೆ ಮಾಡ್ತೀವಿ. ಏಷ್ಯಾದಲ್ಲೆಲ್ಲಾ ಬೊಬ್ಬೆ ಹಾಕ್ತೀವಿ. ಪ್ರಪಂಚ ಸಂಸ್ಥೆ ಬಾಗಿಲಲ್ಲಿ ಬಾಯಿಬಡಿದುಕೊಳ್ಳುತ್ತೀವಿ. ಪ್ರಪಂಚದ ಸುತ್ತ ಸಾಟಲೈಟ್ ತಿರುಗಿಸಿ ಅದರಿಂದ ಚಳುವಳಿಯ ಬೊಬ್ಬೆಯನ್ನು ಪ್ರಸಾರಮಾಡ್ತೀವಿ"

ಎಂದೆಲ್ಲಾ ಹಾರಾಡಲು ಹೋರಾಡಲು ಆರಂಭಿಸಿದರು.

ಇತ್ತ ಬೆಳಗಾಂವಿಯ ಭಕ್ತರೂ ಪಣತೊಟ್ಟರು. ನಮ್ಮ ಗುರುಗಳನ್ನು ಅದಾವ ಮಗ ಅಲ್ಲಾಡಿಸಾನು ನೋಡೇಬಿಡ್ತೀವಿ ಅಂತ.

ಗುರು ಗೋವಿಯ ಬಾಯಿತೆರೆಯಲೇ ಇಲ್ಲ.

ಒಂದು ಸಂಜೆ ಆಸ್ಪತ್ರೆ ದೊಡ್ಡ ಡಾಕ್ಟರಿಗೆ ಚಿಕ್ಕ ಹೆಂಡತಿಯ ಮೊದಲ ಪುಟ್ಟ ಮಗುವಿಗೆ ಸಂದು ಬಂತು. ಆಸ್ಪತ್ರೆಯ ಡಾಕ್ಟರುಗಳೆಲ್ಲಾ ಮಗುವಿನಮೇಲೆ ಕೈಯನ್ನು ಸೂಜಿಯನ್ನು ಆಡಿಸಿದರು. ಮಗು ಮಂಕಾಗೇ ಇತ್ತು. ಆಗ ಆಸ್ಪತ್ರೆ ಜವಾನ ವೈದ್ಯರಿಗೆ ಸಲಹೆ ಮಾಡಿದ. ಬಸ್ ನಿಲ್ದಾಣದ ಗುರುಗಳ ಆಶ್ರಮಕ್ಕೆ ಮಗುವನ್ನು ಕರೆದು ಒಯ್ಯಿರಿ, ದೇವರು ಒಳ್ಳೇದು ಮಾಡಾನು ಅಂತ. ಚಿಕ್ಕ ಹೆಂಡತಿ ಮಾತುಕೇಳಿಕೊಂಡು ಮಗುವನ್ನು ಹೆಗಲಮೇಲೆ ಹಾಕಿಕೊಂಡು ಬಸ್ ನಿಲ್ದಾಣದ ಆಶ್ರಮಕ್ಕೆ ಬಂದರು ಡಾಕ್ಟರು. ಗುರುಗಳ ಕಾಲಬಳಿ ಮಗುವನ್ನು ಮಲಗಿಸಿದರು. ಗುರುಗಳು ಹೊದ್ದಿದ್ದ ಶಾಲು ತೆಗೆದು ಮಗುವಿಗೆ ಗಾಳಿ ಹಾಕಿದರು ಮಗುವಿನ ಮಂಕು ಸ್ವಲ್ಪ ಕಡಿಮೆಯಾದಂತೆ ಕಾಣಿಸಿತು. ಇನ್ನು ಮೂರು ನಾಲ್ಕು ನಿಮಿಷ ಆಗಿರಬಹುದು. ಮಗು ಅಮ್ಮ ಎಂದಿತು. ಆಗ ಡಾಕ್ಟರು ಅವರ ಚಿಕ್ಕ ಹೆಂಡತಿ ಇಬ್ಬರೂ ಗುರುಗಳ ಕಡೆ ಕೈಮುಗಿದು ನೋಡಿದರು. ಎದೆ ಮೇಲೆ ಗಣೇಶ ಕಾಣಿಸಿತು. ಚರ್ಮದ ಗಂಟು ಅಂತ ಅವತ್ತು ಹಾಸ್ಯಮಾಡಿದೆ. ಗಣೇಶನ ಹಾಗೆ ಇದೆ ಎಂದು ಅಪಹಾಸ್ಯಮಾಡಿದೆ. ದಿಟವಾಗಲೂ ಗಜಾನನ ಮೂಡಿದ್ದಾನೆ ಅಂತ ತಿಳಿಯಲಿಲ್ಲ. ತಪ್ಪುಮಾಡಿದೆ ಕ್ಷಮಿಸಿ ಎಂದು ಮಗುವಿನಿಂದ ಮುಂದಾರಿ ಕಾಣುವ ತಂದೆ ಡಾಕ್ಟರು ತಪ್ಪೊಪ್ಪಿಕೊಂಡು ಅಹಂಕಾರ ಕರಗಿ ಅಡ್ಡಬಿದ್ದರು.

—ಶಾಪಿ

' ವಿ ಚಿ ತ್ರ ಪ್ರೇ ಮ '

" ಹೊತ್ತಾಯಿತು ಹೊರಡಿ " ಎಂದಳು
ಕತ್ತನು ಚಾಚುತ ನಮ್ಮವಳು
ಮೆತ್ತಗೆ ಬಾಗಿಲ ಬೀಗವ ಬಡಿದಳು
ಸುತ್ತಲು ನೋಡುತ ನಿಂತವಳು.

ಎಲ್ಲಿಗೆ ? ಎಂದು ನಾನೆಂದೆ
" ಕಲ್ಲಿನದೇನು ನಿಮ್ಮಯ ತಲೆಯು
ಸಿನಿಮಾಗಾದರು ಹೋಗೋಣೆಂದು
ಹೇಳಿದಿರಲ್ಲವೆ ಬೆಳಗೆದ್ದು "

" ನಡೆ ಹಾಗಾದರೆ ಬೀಟೀಯಸ್ಸಿಗೆ "
ತಡವೇಕೆನ್ನುತ ಹೊರಟೆವು ಸ್ಟಾಪಿಗೆ
ಒಡನೆಯೆ ಹಾದಿಯ ನಿಮಿಷದಿ ಕಳೆದೆವು
ಓಡುತ ನಡೆದುದ ಹೇಳಲು ಬೇಕೆ ?

ಏದುತ ಬಂದೆವು ಬಸ್ಸಿನ ಸ್ಟಾಪಿಗೆ
ಬದಿಯಲಿ ನಿಂದಾ ಜನಗಳು ತಾಗೆ
ಇದು ಏನಚ್ಚರಿ ಎನ್ನುತ ನೋಡಿ
ಕದಿಯುತ ಕಂಡರು ಕೆಲವರು ಪೋರರು


ತಾಸಾರಾಯಿತು ಎಂದಳು ಒಡತಿ
" ಬಸ್ಸೇನಾಯಿತು ಬರಲೇಯಿಲ್ಲವು
ಮೀಸ್ಸೇನಾದರು ಆಯಿತೆ ನಮಗೆ
ಹೊಸದೇನಾದರು ಬದಲಾವಣೆಯೆ ? "

ಏನದು ಗುಜು ಗುಜು ಪಕ್ಕದಲಿ
ಬಸ್ಸೇನಾದರು ಬಂದಿತೆಯೆಂದು
ಹಿಂದಕು ಮುಂದಕು ನೋಡುತ ನಾನು
ಕುಂದಿದ ರಾಣಿಯ ಮುಖವಂ ನೋಡಿದೆ.

ಆಚ್ಚರಿಗೊಂಡೆ ಬಸ್ಸಿನ ಶಬ್ದಕೆ
ಆದರೆ ಶಬ್ದವು ಬಸ್ಸಿನದಲ್ಲವು
ಮುಚ್ಚಿದ ಮೋರೆಯ ಕಡೆಯಿಂದರಿತು
ಮಡದಿಯ ಮುಖದಿಂ ಗೊರೆಗೊರೆನೆಂದು

ನಡೆಯಿರಿ ಹಿಂದಕೆ ಸರಸರನೆಂದು
ಬೆಂಕಿಯು ಬೀಳಲಿ ಬೀಟೀಯಸ್ಸಿಗೆ
ಮನೆಯಲಿ ಮಗುವನು ಮರೆತೇಬಿಟ್ಟೆ
ಸಿನಿಮಾ ಹುಚ್ಚಲಿ ಹಸುಗಂದನನು

—"ಅರಾವತ್"



ಸರ್ಕಾರದೋರು ನಿನ್ನ ಮೇಲೆ ಮೊಕದ್ದಮೆ ಹೂಡಿದ್ದಾರಲ್ಲಪ್ಪಾ—
—ಅವರಿಗೆ ಕೊಡೋ ಹಣಾನ ಲಾಯರಿಗೆ ಕೊಡಬೇಕಾಗುತ್ತೆ !

ಶಶಿರೇಖಾ ಪ್ರಣಯ

ಮನುಷ್ಯನಿಗೆ ಸಾಧಾರಣವಾಗಿ ಕಷ್ಟಗಳು ಬರುವುದು, ಆತ ಇದೇನಪ್ಪ ಪ್ರಪಂಚ ಸೌಖ್ಯವಾಗಿದೆ, ದೇವರು ದೊಡ್ಡ ಮನಸ್ಸು ಮಾಡಿ ಪುನಃ ಅವತಾರವೆತ್ತಿ ಭೂಮಿಗೆ ಧಾವಿಸಿ ಬರದೆ ಇದ್ದರೆ ನಮ್ಮ ಸುಖಕ್ಕೆ ಅಡ್ಡಿಯೇ ಇಲ್ಲ ಅಂತ ಸಮಾಧಾನ ಪಡುತ್ತಿರವಾಗಲೇ ! ನಮ್ಮ ಭಾಗೀರಥೀ ಚಿಕ್ಕಮ್ಮನ ಮಗಳು ಮಣೀಗೆ ಗಂಡಿಗೋಸ್ಕರ ಅಲೆದೂ ಅಲೆದೂ, ನನ್ನ ಸ್ನೇಹಿತ ಸಹಪಾಠಿ ಶ್ರೀಕಂಠನಿಗೆ ಕೊಟ್ಟು ಮದುವೆ ಮಾಡೋದೂ ಅಂತ ನಿಶ್ಚಿತಾರ್ಥವಾದ ಮೇಲೆ, ನಾನು ನಿಶ್ಚಿಂತೆ ಇಂದಿದ್ದೆ. ಆದರೆ ಆ ಮುಟ್ಠಾಳ ಶ್ರೀಕಂಠ, ತನ್ನ ಮದುವೆ ನಿಶ್ಚಿತಾರ್ಥವಾಗಿದೆ ಅನ್ನೋದನ್ನು ಮರೆತು, ಅದ್ಯಾವುದೋ ಆಶ್ರಮದ ಕನ್ಯೇನ ಮದುವೆಯಾಗೋಕೆ ಹವಣಿಸಿಕೊಳ್ಳುತ್ತಾನೆ ಅಂತ ನಾನು ತಿಳಿದಿರಲಿಲ್ಲ. ನನ್ನ ಸ್ನೇಹಿತರೆಲ್ಲರೂ ಸಾಧಾರಣವಾಗಿ ಮುಟ್ಠಾಳರೇ ಆದರೂ ಈ ರೀತಿ ಯಾರೂ ನನ್ನ ಕಲ್ಪನೆಯನ್ನೂ ಮೀರಿ ಮುಟ್ಠಾಳತನ ತೋರಿಸಿರಲಿಲ್ಲ. ನನಗೆ ಹೆಬ್ಬೂರಿನಿಂದ ಬಂದ ಕಾಗದ ಓದಿದ ಮೇಲೆ ಪ್ರಪಂಚವೇ ಕುಸಿದ ಹಾಗಾಯ್ತು.

ಶೌರಿ, ನಾನು ಹೆಬ್ಬೂರಿಗೆ ಹೊರಟೆವು. ಮೈಸೂರಿಗೂ ಹೆಬ್ಬೂರಿಗೂ ನಡುವೆ ಇರುವ 22.4 ಕಿಲೋಮೀಟರುಗಳನ್ನು ನನ್ನ ಓಪೆಲ್ಲು ಕೇವಲ 20 ನಿಮಿಷಗಳಲ್ಲಿ ನುಂಗಿತು. ಮಧ್ಯಾಹ್ನ ಊಟದ ಸಮಯಕ್ಕೆ ಹೆಬ್ಬೂರು ಮುಟ್ಟಿದೆವು. ವಿಷಯ ಪೂರ್ತಿ ತಿಳಿಯಿತು. ನನ್ನ ಚಿಕ್ಕಪ್ಪ ಶಂಕರರಾಯರು ಹೆಬ್ಬೂರಿನ ಜಮೀನ್‌ದಾರರು. ತಮ್ಮ ವಸೂಲಿಗೆ ಯಾವುದೋ ಹಳ್ಳಿಗೆ ಹೋಗಿದ್ದರು. ಭಾಗೀರಥೀ ಚಿಕ್ಕಮ್ಮನಿಗೆ ನನ್ನನ್ನು ನೋಡಿದ ತಕ್ಷಣ ಬಹಳ ಸಂತೋಷವಾಗಿರಬೇಕು. ಝಾನ್ಸಿ ಲಕ್ಷ್ಮೀ ಬಾಯಿಗೆ ಪೇಶ್ವೆ ಬಾಜೀರಾಯನನ್ನು ಕಂಡ ಹಾಗಾಯಿತು ಅಂತ ಕಾಣುತ್ತೆ.

" ನೀನು ಬಂದಿದ್ದು ಬಹಳ ಒಳ್ಳೆದಾಯ್ತು, ಪಾಂಡು " ಅಂದರು.

" ಏನು ಚಿಕ್ಕಮ್ಮ ಹೀಗನ್ನುತ್ತಿ ? ನೀನು ಇಷ್ಟು ಕಷ್ಟದಲ್ಲಿ ಸಿಕ್ಕಿರುವಾಗ ನನಗೆ ಮನಸ್ಸಾದರೂ ಹೇಗೆ ಒಪ್ಪೀತು ? ಕಾಗದ ಕಂಡ ತಕ್ಷಣ ಹೊರಟೆ " ಅಂದೆ.

" ಮಣಿ 2 ದಿನಗಳಿಂದ ಊಟ ಮಾಡಿಲ್ಲ, ಪಾಂಡು " ಅಂದರು. ನನಗೆ ಮೈಯೆಲ್ಲಾ ಬೆಂಕಿ ಬೆಂಕಿಯಾಯ್ತು. ಶ್ರೀಕಂಠನ ಅದೃಷ್ಟ ಅವನು, ಆಗ ನನ್ನ ಮುಂದಿರಲಿಲ್ಲ.

" ಶ್ರೀಕಂಠನ ವಿಷಯ ನಿಮಗೆ ಹೇಗೆ ತಿಳೀತು ? "

" ನಿನ್ನ ಚಿಕ್ಕಪ್ಪನ ಸ್ನೇಹಿತರು ರಂಗರಾಯರು ಆ ಮುಟ್ಠಾಳನ್ನ ಮತ್ತೆ ಅದ್ಯಾವುದೋ ಹುಡುಗೀನ ಮೈಸೂರಿನಲ್ಲಿ ಸಯ್ಯಾಜೀ ರಸ್ತೇಲಿ ನೋಡಿದರಂತೆ. ಅವರಿಗೆ ಅನುಮಾನ ಬಂದು ವಿಚಾರಿಸಿದರಂತೆ. ವಿಷಯ ಎಲ್ಲಾ ತಿಳೀತು. ಸಧ್ಯ ನೀನು ಬಂದಿದ್ದರಿಂದ ನಂಗೆಷ್ಟೋ ಧೈರ್ಯ, ಪಾಂಡು "

"ಚಿಕ್ಕಮ್ಮ ನೀನೇನು ಹೆದರಬೇಡ; ಮಣಿ ಎಷ್ಟೇ ಆಗಲಿ ನಾನು ಎತ್ತಿ ಇಳಿಸಿದ ಕೂಸು. ಅವಳಿಗಾಗಿ ಎಷ್ಟು ಕಷ್ಟವಾದರೂ ಸರಿಯೆ ಆ ಮುಟ್ಠಾಳನ್ನ ಹಿಡುಕೊಂಡು ಬಂದು ಅವಳ ಕಾಲು ಹಿಡಿಸ್ತೀನೆ. ಈ ಪಾಂಡುರಂಗರಾಯನ ಛಲ ಅವನಿಗೆ ಗೊತ್ತಿಲ್ಲ!"

ಮೈಸೂರು ಯುದ್ಧಗಳಲ್ಲಿ ಹೊಡೆದಾಡಿದ ನನ್ನ ತಾತ ಮುತ್ತಾತಂದಿರ ರಕ್ತ, ನನ್ನ ನಾಳಗಳಲ್ಲಿ ಬಿಸಿಬಿಸಿಯಾಗಿ ಚಿಮ್ಮುಕ್ಕೆ ಹತ್ತಿತು.

" ನೀನು ಅಂದರೆ ನೀನೇ ಅಂತ ಅಲ್ಲ. ಆ ನಿನ್ನ ಶೌರಿ ಇದ್ದಾನಲ್ಲ ಬಹಳ ಚೂಟಿ ಹುಡುಗ. ಅವನೇನಾದರೂ ಉಪಾಯ ಹುಡುಕ್ತಾನೇನೋ ಅಂತ ಯೋಚನೆ ಮಾಡಿದ್ದೆ."

—ಅಂದರು.

ನನಗೆ ಇದ್ದ ಹುಮ್ಮಸ್ಸೆಲ್ಲಾ ಒಂದೇ ಸಾರಿ ಇಳಿದುಹೋಯ್ತು.

" ಅತ್ತೆ !...." ನನ್ನ ಪೂರ್ತಿ 1.58 ಮೀಟರುಗಳ ಎತ್ತರ ನಿಂತು ಶುರು ಮಾಡಿದೆ.

" ಏನಪ್ಪಾ ಪಾಂಡು ? "

ತಕ್ಷಣ ನನ್ನ ನಾಲಿಗೆಯನ್ನು ಹತೋಟಿಗೆ ತಂದುಕೊಂಡೆ. ಏನೇ ಆಗಲಿ ಈಗ ಕೆಲಸ ಸಾಧಿಸಬೇಕು ಅಂದುಕೊಂಡು ಸುಮ್ಮನಾದೆ.

ಊಟವಾದ ಮೇಲೆ ಪಟ್ಟಣಕ್ಕೆ ವಾಪಸು ಹೊರಟೆವು. ಬರುವಾಗ ಶೌರಿ ಚಿಕ್ಕಮ್ಮನಿಗೆ ಧೈರ್ಯ ಹೇಳಿ ಬಂದ. ಹಾದಿಯಲ್ಲಿ-ನನಗೆ ಮಣಿಯ ಕಣ್ಣೀರೇ ನೆನಪಿಗೆ ಬರುತ್ತಿತ್ತು.

" ಶೌರಿ ಸುತ್ತಲೂ ಜನ ನಗುತ್ತಿರಬೇಕು, ನಾವೂ ನಗುತ್ತ ಅವರನ್ನು ನಗಿಸುತ್ತಿರಬೇಕು, ಬೀಚಿಯವರ ಮಂಕುತಿಮ್ಮ ಹೇಳಿರುವ ಹಾಗೆ ಶೌರಿ ಅಲ್ಲವೆ? " ಅಂದೆ.

" ಬೀ. ಚಿ. ಯವರ ಮಂಕುತಿಮ್ಮ ಅಲ್ಲ ಸರ್, ಡಿ. ವಿ. ಜಿ. ಯವರ ಮಂಕುತಿಮ್ಮ " ಅಂದ.

ಮರುದಿನ ಬೆಳಿಗ್ಗೆ ಸುಮಾರು ಮಾರ್ನಿಂಗ್‌ಷೋ ಶುರುವಾಗುವ ಸಮಯವಿರಬೇಕು ಶ್ರೀಕಂಠ ಬಂದ. ಅವನ ಮುಖವನ್ನು ನೋಡಿದ ತಕ್ಷಣ ಎರಡು ಬಾರಿಸಲೇ ಅನ್ನಿಸಿತು. ಆದರೂ ಸಮಾಧಾನ ತಂದುಕೊಂಡೆ.

" ಹಲೋ ಪಾಂಡು ಏನಯ್ಯ ಸಮಾಚಾರ ? "

" ನನ್ನ ಸಮಾಚಾರ ಏನಿಲ್ಲಪ್ಪ " ಅಂದೆ ಬಿಗುವಾಗಿ.

" ಪಾಂಡು ನಿನ್ನೆ ಹೆಬ್ಬೂರಿಗೆ ಹೋಗಿದ್ದೆಯಂತೆ ? "

" ಹೌದು ಹೋಗಿದ್ದೆ ಹೆಬ್ಬೂರಿಗೆ " ಅದೇ ಬಿಗುಮಾನ.

" ವಿಷಯ ತಿಳಿದಿರಬಹುದು "

ನಾನು ಮಾತನಾಡಲಿಲ್ಲ ಬಿಗುವಾಗಿಯೇ ಇದ್ದೆ.

" ಪಾಂಡು ನಿನ್ನಿಂದ ಒಂದು ಉಪಕಾರವಾಗಬೇಕಲ್ಲಯ್ಯ "

ನಾನು ಮೌನವಾಗಿಯೇ ಇದ್ದೆ ಬಿಗುವಾಗಿ.

" ಪಾಂಡು ನಿಂಗೆ ಅಬಲಾಶ್ರಮ ಗೊತ್ತೆ ? "

ವಿಷಯ ಕಾವೇರುವ ಲಕ್ಷಣ ತೋರಿಸಿತು.

" ಶೌರೀ...." ಅಂತ ಕೂಗಿದೆ

" ಸರ್ " ಅನ್ನುತ್ತಾ ಎರಡು ಲೋಟಾ ಕಾಫಿ ತಂದ.

" ಏನೋ ಇನ್ನು ಕಾಫಿ ಬರ್ಲಿಲ್ಲಾಂತ ಕೂಗಿದೆ ಅಷ್ಟೆ " ಅನ್ನುತ್ತಾ ಶೌರಿಗೆ ಸನ್ನೆ ಮಾಡಿದೆ.

ಶ್ರೀಕಂಠ ಶುರು ಮಾಡಿದ—

" ಪಾಂಡು—ಅದೇ ಅಬಲಾಶ್ರಮ ಹೇಳಿದೆನಲ್ಲಾ, ಅಲ್ಲಿ ಶಶಿರೇಖಾ ಅಂತ ಒಬ್ಬ ಹುಡುಗಿ ಇದ್ದಾಳೆ—ಪಾಂಡು—ಪ್ರಾಯಶಃ ನಾನು ಆ ಹುಡುಗೀನ ಮದುವೆಯಾಗ ಬೇಕೂಂತ ಇದ್ದೇನೆ—ಪಾಂಡು."

ಶ್ರೀಕಂಠನ ಈ ನೇರ ಕಾರ್ಯಕ್ರಮಕ್ಕೆ ನಾನು ತಯಾರಿರಲಿಲ್ಲ. ನಾನು ಅವನ್ನ ಹುಡುಗತನದಿಂದಲೂ ಬಲ್ಲೆ. ಎಂದೂ ಈ ತರಹ ಸಂಕಟದಲ್ಲಿ ನಾನು ಸಿಕ್ಕಿರಲಿಲ್ಲ. ಆದರೂ ಈಗ ಅವನ ಹೃದಯವನ್ನು ಭೇದಿಸುವಂಥ ಉತ್ತರ ಕೊಡ ಬೇಕೆಂದು ಯೋಚಿಸುತ್ತ ಇರುವಾಗಲೇ ಮುಂದುವರಿದ—

" ಪಾಂಡು—ಈ ವಿಷಯದಲ್ಲಿ ನೀನು ನನಗೆ ಸಹಾಯ ಮಾಡಬೇಕು. ಶಶಿರೇಖಾ ಆಶ್ರಮದಲ್ಲಿ ಬೆಳೆದ ಹುಡುಗಿ. ದೇವರಲ್ಲಿ ವಿಪರೀತ ಭಕ್ತಿ, ಸದಾ ಭಜನೆ ಪೂಜೆ! ಆದರೆ ನಾನೊಬ್ಬ ಶುದ್ಧ ಮುಟ್ಠಾಳ ನಾಸ್ತಿಕನೆಂದು ತಿಳಿದಿದ್ದಾಳೆ. ನಾನೀಗ—ನಾನು, ನನ್ನ ಸ್ನೇಹಿತರು ಎಲ್ಲರೂ ಬಹಳ ಸಾಧುಗಳು ದೈವಭಕ್ತರು ಅಂತ ತೋರಿಸ ಬೇಕಾಗಿದೆ. ಆದ್ದರಿಂದ ನಾಳೆ ಸಾಯಂಕಾಲ ಇಲ್ಲಿಗೆ ಆಶ್ರಮದ ಸ್ವಾಮಿಜೀನ ಮತ್ತು ಶಶಿರೇಖಾನ ಕರ್ಕೊಂಡು ಬರ್ತೀನೆ. ಇಲ್ಲಿ ಒಂದು ಚಿಕ್ಕ ಭಜನೇನ ಏರ್ಪಾಡು ಮಾಡಬೇಕು. ನಿನ್ನ ಮನೆಯ ಹಾಲು ಬಹಳ ಚೆನ್ನಾಗಿ ಒಪ್ಪುತ್ತೆ....ಒಂದು ಸ್ವಲ್ಪ ಹಣ್ಣು ಸ್ವಲ್ಪ ಹಾಲು ತರಿಸಿಬಿಟ್ಟಿರು. ಅಷ್ಟೇ ಇನ್ನೇನೂ ಬೇಕಾಗಿಲ್ಲ .. ಪಾಂಡು, ನೀನು ಚೆನ್ನಾಗಿ ಹಾಡ್ತಾ ಇದ್ದೆ ಅಲ್ವೆ ? "

ಶ್ರೀಕಂಠನ ರಗಳೆಯನ್ನು ಮಟುಕು ಮಾಡಬೇಕಾದ ಸಮಯ ಬಂತು ಅಂತ ನಿರ್ಧರಿಸಿದೆ.

" ಇಲ್ಲ. ನಾನು ಎಂದೂ ಹಾಡಿಲ್ಲ. ಹಾಡೊಲ್ಲ ! " ಅಂದೆ.

ಶೌರಿ ಕೆಮ್ಮಿದ ಹಿಂದಿನಿಂದ.

ತಿರುಗಿದೆ.

" ಕ್ಷಮಿಸಿ ಸರ್, ನೀವು ಒಂದೊಂದು ಬಾರಿ ಚೆನ್ನಾಗಿ ಹಾಡೋದನ್ನ ನಾನು ಕೇಳಿದ್ದೇನೆ ಸರ್ " ಅಂದ.

" ಹೌದು ಶೌರಿ ನಂಗೊತ್ತು. ಸ್ಕೂಲಿನಲ್ಲಿದ್ದಾಗ ಪಾಂಡುರಂಗರಾಯರು ಬಹಳ ಚೆನ್ನಾಗಿ ಹಾಡಿದ್ದನ್ನ ನಾನು ಕೇಳಿದ್ದೇನೆ "

ಅಂತ ಸೇರಿಸಿದ ಪಾಪಿ ಶ್ರೀಕಂಠ.

" ನಾನ್ಯಾಕಯ್ಯಾ ಹಾಡಬೇಕು ? " ಅಂದೆ. " ನಿನ್ನ ಚರಮಗೀತೆ ಬೇಕಾದರೆ ಸಂತೋಷವಾಗಿ ಹಾಡ್ತೇನೆ " ಅಂತ ಸೇರಿಸಬೇಕೆಂದಿದ್ದೆ, ಆದರೆ ಆಗ ಜ್ಞಾಪಕಕ್ಕೆ ಬರಲಿಲ್ಲ.

" ಪಾಂಡು, ನಾನು ನೀನು ಬಾಲ್ಯ ಸ್ನೇಹಿತರು. ನಿನ್ನ ಬಾಯಿನಿಂದ ದೋಸೆ ಕಸಿದು ನಾನು ತಿಂದಿದ್ದುಂಟು. ಈಗ ಈ ಒಂದು ಸಣ್ಣ ಉಪಕಾರ ಮಾಡೊಲ್ವೆ ? " ಅಂತ ಗೋಗರೆದ.

" ನನಗೆ ದೇವರ ನಾಮಗಳಂತೂ ಖಂಡಿತ ಹಾಡುಕ್ಕೆ ಬರೊಲ್ಲವಲ್ಲಯ್ಯಾ " ಅಂದೆ.

" ಯಾಕೆ ಬರೊಲ್ಲ ಸಾರ್ ? 'ಕಂಗಳಿದ್ಯಾತಕೋ ಕಾವೇರಿರಂಗನ ನೋಡದಾ' ಅಂತ ಹಾಡ್ತಾ ಇರ್ತೀರಲ್ಲಾ ಸರ್ !' ಅಂದ ಶೌರಿ.

" ಷಹಭಾಸ್ ಶೌರಿ! ಹೌದಯ್ಯಾ, ಅದೇ ಹಾಡನ್ನ ಹಾಡಯ್ಯ. ಶಶಿರೇಖಾಗೆ ಖರಹರಪ್ರಿಯ ಅಂದರೆ ಬಹಳ ಪ್ರೀತಿ " ಶ್ರೀಕಂಠ ಹುಮ್ಮಸ್ಸಿನಿಂದ ಹೇಳಿದ.

" ಕಂಗಳಿದ್ಯಾತಕೋ ಕರಹರಪ್ರಿಯವಲ್ಲ ಸರ್. ತೋಡಿರಾಗದ ಕೀರ್ತನೆ " ಅಂದ ಶೌರಿ.

ಶೌರಿಗೆ ಎಲ್ಲ ವಿಷಯವೂ ಗೊತ್ತು.

" ಪರವಾಗಿಲ್ಲ ಶೌರಿ, ಅಂತೂ ನಾವೆಲ್ಲ ಸೇರಿ ಭಜನೇನ ಯಶಸ್ವಿಯಾಗಿ ನಡೆಸಿದರೆ ಸಾಕು. ಪಾಂಡು, ಮತ್ತೊಂದು ವಿಷಯ. ಶಶಿರೇಖಾಗೆ ಹಾಸ್ಯ ಕುಚೇಷ್ಟೆ ಒಂದೂ ಹಿಡಿಸೊಲ್ಲ ಆದ್ದರಿಂದ ಎಲ್ಲಾ ಗಂಭೀರವಾಗಿ ನಡೀಬೇಕು. ಓಹೋ ! ಮಧ್ಯಾಹ್ನದ ಭಜನೆಯ ಸಮಯವಾಯ್ತು ನಾನು ಹೊರಡ್ತೇನೆ " ಅನ್ನುತ್ತ ಹೊರಟೇಬಿಟ್ಟ.

" ಶೌರಿ...."

" ಸರ್ "

" ನನ್ನನ್ನೇತಕ್ಕೆ ಈ ಕಷ್ಟದಲ್ಲಿ ಸಿಕ್ಕಿಹಾಕಿದ್ದಿ ?"

" ಪಾಪ ಶ್ರೀಕಂಠರಾಯರು ಅಷ್ಟು ಹುಮ್ಮಸ್ಸಿನಲ್ಲಿದ್ದಾಗ ಹೇಗೆ ಸಾರ್ ನಾವು ಸುಮ್ಮನಿರೋದು ?"

" ಮತ್ತೆ ಹೆಬ್ಬೂರಿನ ವಿಷಯ ?"

" ಅದು ಯೋಚಿಸ್ತಾ ಇದ್ದೇನೆ ಸರ್"

" ಮಾರನೆಯ ದಿನ ಸಾಯಂಕಾಲ 4 ಗಂಟೆಗೆಲ್ಲಾ ನನ್ನ ಮನೆಯ ಹಾಲು ದೇವಸ್ಥಾನದ ಹಾಗೆ ಮಾರ್ಪಾಡಾಯ್ತು. ಒಂದು ಮಂಟಪ-ಮಂಟಪದಲ್ಲಿ ದೇವರ ಪಟಗಳು, ಎದುರಿನಲ್ಲಿ ಊದುಬತ್ತಿಗಳ ಧೂಪ. ಸೋಫ ಕುರ್ಚಿಗಳೆಲ್ಲಾ ಗೋಡೆಗಳ ಅಂಚಿಗೆ ಸರಿದವು. ಮಧ್ಯದಲ್ಲಿ ಚಾಪೆಗಳು ಮಾತ್ರ. ಹಾಲಿನಲ್ಲಿ ಕಾಲಿಟ್ಟೊಡನೆ ಎರಡೂ ಕೈಗಳು ತಾವಾಗಿಯೇ ಜೋಡಿಸಿಕೊಂಡು ತಲೆ ತಾನಾಗಿಯೇ ಬಗ್ಗಿ ಕಣ್ಣು ಗಳನ್ನು ಮುಚ್ಚಿಸುವ ವಾತಾವರಣ! ನಾನು ಇದೇ ರೀತಿ ನುಗ್ಗಿ, ಹೆದರಿ, ಆಶ್ರಮದ ಮಂದಿ ಇಲ್ಲಿಗೆ ಧಾವಿಸುವುದಕ್ಕೆ ಮೊದಲೇ ಪರಾರಿಯಾಗಲೇ ಅನ್ನಿಸಿತು.

ಆದರೆ ಸಮಾಚಾರ ನನ್ನ ಕೈ ಮೀರಿದ್ದು.

5 ಘಂಟೆಗೆಲ್ಲಾ ಮನೆಯ ಮುಂದೆ ನಾಲ್ಕು ಟಾಂಗಾಗಳಲ್ಲಿ ಭಕ್ತರು ಚಿತ್ತೈಸಿದರು. ಶ್ರೀಕಂಠ ಕಾಲೇಜಿನಲ್ಲಿದ್ದಾಗ ತನ್ನ ಫುಟ್‌ಬಾಲ್ ಟೀಮನ್ನು ಪಂದ್ಯದ ಮೈದಾನಕ್ಕೆ ಕರೆತರುತ್ತಿದ್ದ ರೀತಿಯಲ್ಲಿ ಈ ಆಶ್ರಮಿಗಳನ್ನೂ ಕರೆತಂದ. ಪರಸ್ಪರ ಪರಿಚಯವಾಯ್ತು.

ಶಶಿರೇಖಾ ಶ್ರೀಕಂಠನಿಗೆ ತಕ್ಕ ಹೆಣ್ಣೆಂದೇ ಹೇಳಬೇಕು. ಮೇಲು ತುಟಿಯ ಮೇಲೆ ಚಿಗುರು ಮೀಸೆಯ ಕರುಡು ಪ್ರತಿ. ಅದು ಇಲ್ಲದಿದ್ದರೆ ಆಕೆಯನ್ನು ಶ್ರೀಕಂಠನ ಅವಳಿ ತಮ್ಮ ಅಂತ ಹೇಳಬಹುದು. ಆಶ್ರಮದಿಂದ ಬಂದವರಲ್ಲಿ ನನ್ನ ಸ್ನೇಹಿತರು ಮತ್ತೆ ಮೂವರು ಸಿಕ್ಕಿದರು. ಹರಿ ಯಾವುದೋ ಬ್ಯಾಂಕಿನಲ್ಲಿ ಪ್ರತಿನಿತ್ಯ 10ರಿಂದ 4ರವರೆವಿಗೆ ತೂಕಡಿಸುತ್ತಾನೆ. ಶನಿವಾರ ಮಧ್ಯಾಹ್ನ 2 ಘಂಟೆಗೆ ಎಬ್ಬಿಸಿ ಹೊರಗಟ್ಟುತ್ತಾರೆ. ಪ್ರಾಣೇಶ (ಮಾವನ ಆಸ್ತಿ) ಮತ್ತು ಅಚ್ಚಿ (ಮುದ್ದಿನ ಲಕ್ಷ್ಮೀನಾರಾಯಣ ಕಾಲೇಜು ಮೇಡಂ ಗಂಡ) ಇವರೂ ಇದ್ದರು. ಎಲ್ಲರೂ ನನ್ನ ಹಾಗೆ ಶ್ರೀಕಂಠನಿಗೆ ನೆರವು ನೀಡಲು ಬಂದವರು.

ಭಜನೆ ಶುರುವಾಯ್ತು. ಆಶ್ರಮದವರಿಂದ ಸಮೂಹಗೀತೆಯಾಯ್ತು. ಕಂಠಿ ನನ್ನನ್ನು ಚುಚ್ಚಿದ. ಕಿವಿಯಲ್ಲಿ ಶುರು ಮಾಡಯ್ಯ ಅಂದ. 'ಕಂಗಳಿದ್ಯಾತಕೋ ಕಾವೇರಿ ರಂಗನ ನೋಡದೆ' ಹಾಡು ಶುರು ಮಾಡಿದೆ. ನನಗೆ ಪುನಃ ಜ್ಞಾನ ಬಂದಾಗ ಹಾಡು ಮುಗಿದಿತ್ತು. ಶಶಿರೇಖಾ 'ಈ ಪರಿಯ ಸೊಬಗಾವ' ಹಾಡಿದಳು. ಶ್ರೀಕಂಠನೂ ಆಕೆ ಹಾಡುವಾಗ ಜೊತೆಯಲ್ಲಿ ತನ್ನ ಧ್ವನಿ ಕೂಡಿಸಿದ್ದ ಅಂತ ನನಗೆ

ಅನುಮಾನ. ಅಂತೂ ಭಜನೆ ಮುಗಿಯಿತು. ನಾನು ತರಿಸಿದ್ದ ಬಾಳೆ ಹಣ್ಣುಗಳು, ಕಿತ್ತಲೇ ಹಣ್ಣುಗಳು, ತೆಂಗಿನ ಕಾಯಿಗಳು, ಹಾಲು, ಸಕ್ಕರೆ, ಬಾದಾಮಿ ಎಲ್ಲಾ ಖರ್ಚಾದವು. ಸಭೆ ಮುಕ್ತಾಯವಾಯ್ತು. ಶ್ರೀಕಂಠ ನನ್ನ ಹತ್ತಿರ ಬಂದ.

"ಬಹಳ ಥ್ಯಾಂಕ್ಸ್ 'ಪಾಂಡು ನನಗೆ ಗೊತ್ತಿತ್ತು ನೀನು ನನ್ನ ಕೈಬಿಡೊಲ್ಲ ಅಂತ. ನಾಳಿದ್ದು ಸಂಜೆ ಆರುಘಂಟೆಗೆ ಹೈಸ್ಕೂಲಿನಲ್ಲಿ ಆಶ್ರಮದ ಸಂಗೀತೋತ್ಸವ ಇದೆ. ನಿಧಿ ಕೂಡಿಸಬೇಕಾಗಿದೆ. ನೀನು ಖಂಡಿತ ಬರಲೇಬೇಕು' ಪಾಂಡು." –ಅವತ್ತೂ ನಿನ್ನಿಂದ ಸಂಗೀತ ಏರ್ಪಾಡು ಮಾಡ್ತೀನೆ—ನಾನು ಹೊರಡ್ತೆನಯ್ಯ...."

—ಅನ್ನುತ್ತಾ ತನ್ನ ಮಂದೆಯನ್ನು ಅಟ್ಟುತ್ತಾ ಹೊರಟೇಬಿಟ್ಟ. ಹರಿ, ಪ್ರಾಣೇಶ, ಅಚ್ಚಿ ಒಂದೇ ಒಂದು ಬಾರಿ ನನ್ನ ಕಡೆ ನೋಡಿ ಕಣ್ಣು ಹೊಡೆದಿದ್ದರು. ಅವರೂ ಜಾರಿದರು.

"ಶೌರೀ...." ಅಂತ ಕೂಗಿದೆ

"ಸರ್"

"ಮುಂದೇನು ?"

"ಕಲ್ಪನೆ ತಡಬಡಾಯಿಸುತ್ತೆ, ಸರ್" ಅಂದ.

ನನ್ನ ಕಲ್ಪನೆಯನ್ನು ಪರೀಕ್ಷಿಸಿದೆ. ಶೌರಿಯ ಮಾತು ನಿಜ ತಡಬಡಾಯಿಸುತ್ತಿತ್ತು.

ನನಗೆ ಶ್ರೀಕಂಠನ ಬಗ್ಗೆ ವಿಪರೀತ ಯೋಚನೆ ಹತ್ತಿತು. ಆ ಮುಟ್ಠಾಳ ಪ್ರೇಮಪಾಶಕ್ಕೆ ಸಿಕ್ಕಿ ಬಿದ್ದಿರುವುದು ಇದೇನು ಮೊದಲುಬಾರಿಯೇನಲ್ಲ. ಹಿಂದೆ ಕನಿಷ್ಟ ಪಕ್ಷ ಹದಿನೈದು ಬಾರಿ ಈ ರೀತಿ ಆಗಿದ್ದಾನೆ. ಶ್ರೀಕಂಠ ಎಂದೇ ಆಗಲಿ, ಪೆಚ್ಚು ಮೋರೆ ಮಾಡಿಕೊಂಡು, ಸತ್ತ ಗೂಬೇಕಣ್ಣು ಬಿಟ್ಟುಕೊಂಡು ನಮ್ಮ ಜೊತೆಯಲ್ಲಿದ್ದಾಗಲೆಲ್ಲಾ ನಮಗೆ ಗೊತ್ತು. ಆಗ, ಚಂದ್ರಭವನದ ಪರೋಟ ಬಾಸುಂದಿಗಳು ಕೂಡ ಅವನಿಗೆ ಬೇಡವೆನ್ನಿಸುತ್ತಿದ್ದವು. ಆದರೆ ಇದುವರಿಗಿನ ಮೋಹಿನಿ ಕಾಟಗಳೆಲ್ಲಾ ಅವನಿಗೆ ಒಂದು ಬಾರಿಯ ಪರೋಟ ಬಾಸುಂದಿಗಳ ಪ್ರಮಾಣದ್ದು. ಯಾವುದೂ ಶಾಶ್ವತವಾಗಿ ನಿಲ್ಲಲಿಲ್ಲ. ಅದಕ್ಕಾಗಿಯೇ ಶ್ರೀಕಂಠನಿಗೆ ಅ. ಕ. ವಿ. ಪ್ರೇಮದ ಗೌರವ ಸದಸ್ಯತ್ವ ಕೂಡ ಸಿಕ್ಕಿದ ಹಾಗಿಲ್ಲ. ನಾನಂತೂ ಧೈರ್ಯವಾಗಿದ್ದೆ ಭಾಗೀರಥೀ ಚಿಕ್ಕಮ್ಮನ ಮಗಳು ಮಣಿಯ ಜೊತೆ ಮದುವೆಯಾಗಿಬಿಟ್ಟರೆ ಸರಿಹೋಗ್ತಾನೆ ಅಂತ. ಆದರೆ ನನ್ನ ಧೈರ್ಯ ಹಾಳುಮಾಡುವುದಕ್ಕೆ ಈ ಶಶಿರೇಖಾ ಬರಬೇಕೇ ?

ಶೌರಿಯ ವರ್ತನೆಯ ಬಗ್ಗೆ ನನಗೆ ಸ್ವಲ್ಪ ಅನುಮಾನ ಬಂತು. ಭಜನೆಯಾದ ಮಾರನೆಯ ದಿನವೆಲ್ಲಾ ನನಗೆ ಹಾಡಲು ಚೆನ್ನಾಗಿ ಅಭ್ಯಾಸ ಮಾಡಿಕೊಳ್ಳುವ ಹಾಗೆ

ಉಪದೇಶ ಮಾಡಿದ. ಹೈಸ್ಕೂಲು ಸಮಾರಂಭದ ದಿನವಂತೂ ಬೆಳಗ್ಗಿನಿಂದ ಮಧ್ಯಾಹ್ನದವರಿವಿಗೆ ಇಪ್ಪತ್ತು ಬಾರಿ ಅಭ್ಯಾಸ ಮಾಡಿದೆ. ಆರು ಘಂಟೆಗೆ ನಾನು ಶೌರಿ ಸ್ಕೂಲಿನ ಅಖಾಡಾ ಸೇರಿದೆವು. ಜನ ಕಿಕ್ಕಿರಿದಿದ್ದರು. ಅಂಗಳದಲ್ಲಿ ಒಂದು ಕಡೆ ವೇದಿಕೆಯನ್ನು ಅಣಿ ಮಾಡಿದ್ದರು. ಅಲ್ಲಿ ಸಂಗೀತ ಮತ್ತು ಭಾಷಣಗಳಿಗೆ ಬೇಕಾದ ಸಲಕರಣೆಗಳನ್ನೆಲ್ಲಾ ಶೇಖರಿಸಿದ್ದರು. ಆದರೆ ಶ್ರೀಕಂಠ, ಶಶಿರೇಖಾ ಅಥವಾ ನನ್ನ ಇತರೇ ಸ್ನೇಹಿತರಾರೂ ಕಾಣಲಿಲ್ಲ.

" ಶೌರಿ ಗೊಂದಲ ವಿಪರೀತವಾಗಿದೆ " ಅಂದೆ.

" ಹೌದು ಸರ್ ಆಶ್ರಮ ಬಹಳ ಹೆಸರುವಾಸಿಯಾದ್ದೂಂತ ಕಾಣುತ್ತೆ "

" ನಾನು ನೇರವಾಗಿ ವೈಗಳ್ಳರ ಸಂಘಕ್ಕಾದರೂ ಹೋಗ್ತೀನೆ ಈ ಪೀಡೆ ನನಗೆ ಬೇಡ " ಅಂದೆ.

" ಬೇಡಿ ಸರ್ ಇಷ್ಟು ದೂರ ಬಂದು ವಾಪಸಾಗುವುದು ಬೇಡ. ಎದುರುಗಡೆ ಕಾಫಿಕ್ಲಬ್ ಇದೆ. ಆರಾಮವಾಗಿರಿ ಅಲ್ಲಿ. ಸಮಯ ಬಂದಾಗ ಕರೀತೀನೆ " ಅಂದ.

ಶೌರಿಯ ಸಲಹೆ ಸರಿ ಎನ್ನಿಸಿತು. ಕ್ಲಬ್ಬಿಗೆ ಹೋಗಿ ಕುಳಿತೆ. ಎಷ್ಟು ಹೊತ್ತು ಕುಳಿತೆನೋ ಎಷ್ಟು ಕಾಫಿ ಕುಡಿದೆನೋ ಜ್ಞಾಪಕವಿಲ್ಲ. ಶಾಲೆಯ ಅಂಗಳದಿಂದ ಗೊಂದಲ ಕಿವಿಗೆ ಬೀಳುತ್ತ ಇತ್ತು. ಶೌರಿ ಬಂದ.

" ನಿಮಗಾಗಿ ಕಾದಿದ್ದಾರೆ ಸರ್ " ಅಂದ

ಎದ್ದೆ.

" ಕಂಠಿ ಬಂದನೇ ಶೌರಿ ? "

" ಬಂದಿದ್ದಾರೆ ಸರ್ ಇದೇತಾನೆ ಪಕ್ಕದ ಹೋಟೆಲಿಗೆ ಹೋದರು "

" ಸಧ್ಯ ಶ್ರೀಕಂಠ ಸಮಾರಂಭಕ್ಕೆ ಪುನಃ ಬರುವುದರೊಳಗಾಗಿ, ನನ್ನ ಸಂಗೀತ ಮುಗಿದರೆ ಒಳ್ಳೇದು, ಶೌರಿ "

" ನಾನೂ ಹಾಗೇ ಯೋಚಿಸಿದ್ದೆ ಬನ್ನಿ ಸರ್ "

ಸಭಾಂಗಣದಲ್ಲಿ ನುಗ್ಗಿ ವೇದಿಕೆಯ ಮೇಲೆ ಕುಳಿತೆ. ನನ್ನ ಬಾಯಿಗೆ ಧ್ವನಿ ವರ್ಧಕ ಯಂತ್ರದ ಬುರುಡೆ ತುರುಕಿದರು. ಅದನ್ನು ಬಿಡಿಸಿಕೊಂಡೆ. ನನ್ನ ಪಕ್ಕದಲ್ಲಿ ಹಾರ್ಮೋನಿಯಂ ತಬಲಾದವರು ಶ್ರುತಿ ಮಾಡಿದರು. ನಾನು ಹಾಡಲು ಶುರು ಮಾಡಿವೆ. " ಕಂಗಳಿದ್ಯಾತಕೋ " ಅಂತ ಶುರು ಮಾಡಿದ ತಕ್ಷಣ ಸಭೆಯಲ್ಲೆಲ್ಲಾ ಒಂದು ರೀತಿಯ ನಿಶ್ಶಬ್ದ ವಾತಾವರಣ ಕಂಡಿತು ಆದರೆ, ಸಭಿಕರ ಪ್ರತಿಕಿಯೆ ವರ್ಣಿಸ ಲಾರೆ. ಒಂದು ವೇಳೆ ನಾನೊಬ್ಬ ಅಂಚೆ ಇಲಾಖೆಯ ಸತ್ಯಾಗ್ರಹಿಯಾಗಿ, ಇಲಾ ಖೆಯ ಆಮರಣಾಂತ ಸತ್ಯಾಗ್ರಹಕ್ಕೆ ಅವರ ಸಹಾಯ ಕೋರುತ್ತಿದ್ದರೆ ಅದೇ ರೀತಿ

ವರ್ತಿಸುತ್ತಿದ್ದರೆಂದು ಮಾತ್ರ ಹೇಳಬಲ್ಲೆ. ಅಂತೂ ಯಾವ ಪೆಟ್ಟೂ ತಿನ್ನದೆ ಹಾಡು ಮುಗಿಸಿ ಕೆಳಗಿಳಿದೆ. ಬೆವರುತ್ತ ಶೌರಿಯನ್ನು ನೇರಿದೆ.

" ಹೇಗಿತ್ತು ಶೌರಿ ? "

" ಪರವಾಗಿಲ್ಲ ಸರ್. ಆದರೆ ಇದೇ ಹಾಡನ್ನು ಹರಿರಾಯರು, ಪ್ರಾಣೇಶ ರಾಯರು ಆಗಲೇ ಹಾಡಿದ್ದರು "

" ಶೌರಿ ನೀನು ಈ ಮಾತನ್ನ ಮೊದಲೇ ಯಾಕೆ ಹೇಳಲಿಲ್ಲ ? ತಿಳಿದೂ ತಿಳಿದೂ ನನ್ನನ್ನ ಈ ಅವಸ್ಥೆಗೆ ಗುರಿ ಮಾಡಿದ್ದೀಯಲ್ಲ ! " ಅಂತ ಬಿರುಸಾಗಿ ಹೇಳಿದೆ.

" ಕ್ಷಮಿಸಿ ಸರ್. ಆಮೇಲೆ ಹೇಳ್ತೀನೆ. ಅಗೋ ಸರ್ ಶ್ರೀಕಂಠರಾಯರು ಬಂದರು "

ಹೌದು ಶ್ರೀಕಂಠ ವೇದಿಕೆಯನ್ನು ಹತ್ತುತ್ತಿದ್ದ. ಹತ್ತಿ ಕುಳಿತ. ಸಭಿಕ ರನ್ನೆಲ್ಲಾ ಒಂದು ಬಾರಿ ನೋಡಿದ, ಮಾರಮ್ಮನನ್ನು ಕೋಣ ನೋಡುವ ಹಾಗೆ ! ಅವನ ಮುಖದ ಕಾಂತಿ ಇಳಿಯಿತು. ಹಾರ್ಮೋನಿಯಂ ಶ್ರುತಿ ಶುರುವಾಯ್ತು. ತಬಲಾ ಡಬ್ ! ಶಬ್ದ ಮಾಡಿತು. ಶ್ರೀಕಂಠ ಬೆಚ್ಚಿದ.

" ಶೌರಿ, ಈ ಸಭೆಯಲ್ಲಿ ಶಶಿರೇಖಮ್ಮ ಕಾಣೊಲ್ಲವಲ್ಲ ? " ಅಂತ ಕೇಳಿದೆ.

ಸಭೆ ಶುರುವಾದಾಗಲಿಂದ ಆಕೆಯ ಸುಳಿವೇ ಇಲ್ಲ.

" ಬರ್ತಾರೆ ಸರ್ ಆಶ್ರಮದ ನಿಧಿಗೆ ಇಪ್ಪತ್ತೈದು ರೂಪಾಯಿ ಕೊಡ್ತೇನೆಂತ ನನ್ನ ಅಕ್ಕ ಹೇಳಿದ್ದರು. ಅದಕ್ಕಾಗಿ ಅವರ ಮನೆಗೆ ಕಳುಹಿಸಿದ್ದೇನೆ. ಇನ್ನು ಕಾಲು ಘಂಟೆಗೆಲ್ಲಾ ಇಲ್ಲಿಗೆ ಬರ್ತಾರೆ " ಅಂದ.

" ಶೌರಿ ಈ ಸಮಯದಲ್ಲಿ ಆಕೆ ಇಲ್ಲಿರಬೇಕಾಗಿತ್ತು. ಶ್ರೀಕಂಠನ ಅವಸ್ಥೆ ಯನ್ನು ಕಂಡಿದ್ದರೆ ಚೆನ್ನಾಗಿತ್ತು "

" ಹೌದು ಸರ್ ಆದರೆ ನಿಧಿ ಬೇಕಾಗಿದೆಯಲ್ಲಾ ಸರ್."

ಶ್ರೀಕಂಠ ತನ್ನ ಸಂಗೀತವನ್ನು ಶುರುಮಾಡಿದ. ಆ ಪಾಪಿ ಹಾರ್ಮೋನಿಯಂ. ಆತ ತನ್ನ ಬೆರಳುಗಳಿಗೆ ಸಿಕ್ಕಿದ ಮನೆಗಳನ್ನೆಲ್ಲಾ ಉಪಯೋಗಿಸಲು ನೋಡಿದ. ಯಾವುದೂ ಶ್ರೀಕಂಠನ ಕಂಠಕ್ಕೆ ಸರಿತೂಗಲಿಲ್ಲ. ತಬಲಾದವನು ಕರ್ಣಾಟಕಿ, ಹಿಂದುಸ್ಥಾನಿ, ಪಂಜಾಬಿ, ಚೀಣೀ ಮುಂತಾದ ಯಾವ ಯಾವುದೋ ತಾಳಗಳನ್ನು ಬಾರಿಸಲು ನೋಡಿದ ಯಾವುದೂ ಶ್ರೀಕಂಠನ ಲಯಕ್ಕೆ ಸರಿಯಾಗಲಿಲ್ಲ. ತೆಪ್ಪಗೆ ಕುಳಿತರು ಇಬ್ಬರೂ. ಶ್ರೀಕಂಠ ಹಾಳುಭಾವಿಯಲ್ಲಿ ಬಿದ್ದವರು ಸಹಾಯಕ್ಕೆ ಕೂಗಿ ಕೊಳ್ಳುವ ಹಾಗೆ ಅರಚುತ್ತಿದ್ದ. ನನಗಂತೂ ಹಾಡಿನ ಮಾತುಗಳು ಕೇಳಿಸಲಿಲ್ಲ

" ಶೌರಿ, ಶ್ರೀಕಂಠ ಹೇಳುತ್ತಿರುವುದೇನು ಕೇಳು ? "

ಶೌರಿ ಕಿವಿಕೊಟ್ಟು ಕೇಳಿದ.

" ಸರ್ ಪ್ರಾಯಶಃ ' ಕಂಗಳಿದ್ಯಾತಕೋ....' "

ಶೌರಿಯ ಮಾತು ಮುಗಿದಿರಲಿಲ್ಲ. ಒಂದು ಇಟ್ಟಿಗೆ ವೇದಿಕೆಯ ಮೇಲೆ ಬಿತ್ತು.

ನನಗೆ ಅಲ್ಲಿ ನಿಲ್ಲಲು ಸಾಧ್ಯವಾಗಲಿಲ್ಲ. ನಾನು ಮನೆಯ ಕಡೆ ಹೊರಡುತ್ತೀನೆಂದು ಶೌರಿಗೆ ಹೇಳಿ ಹೊರಟೆ.

" ಆಗಲಿ ಸರ್, ನಾನು ಸ್ವಲ್ಪ ಹೊತ್ತಿದ್ದು ಬರ್ತೀನಿ" ಅಂದ.

ಶೌರಿ ಮನೆಗೆ ಬರುವ ಹೊತ್ತಿಗೆ ಸಿನಿಮಾ ಸೆಕಂಡ್‌ಷೋ ಶುರು ಆಗುವ ಹೊತ್ತಾಗಿತ್ತು.

" ಶ್ರೀಕಂಠರಾಯರು ನಾಳೆ ಬೆಳಿಗ್ಗೆ ಒಂಭತ್ತು ಘಂಟೆಗೆ ನಿಮ್ಮನ್ನು ಭೇಟಿಯಾಗ್ತಾರಂತೆ ಸರ್ " ಅಂದ.

" ಏನಂತೆ ? ಯಾಕಂತೆ ? ? "

" ಪ್ರಾಯಶಃ ಹೆಬ್ಬೂರಿಗೆ ಹೋಗ್ಬೇಕಾಗುತ್ತೆ, ಸರ್ "

ತಲೆಯಲ್ಲಿ ಏನೋ ಸಿಡಿಯಿತು.

" ಸಭೆ ಹೇಗೆ ಮುಕ್ತಾಯವಾಯ್ತು ? "

" ಶ್ರೀಕಂಠರಾಯರಿಗೆ ಹಾಡು ಮುಗಿಸೋಕೆ ಬಿಡಲಿಲ್ಲ ಸರ್, ಜನ ರೊಚ್ಚಿದ್ದರು "

" ನಾನು ಅದನ್ನು ನೆನೆಸಿದ್ದೆ ಶೌರಿ. ಶಶಿರೇಖಾ...."

" ಆಕೆ ಮಹಿಳೆಯಾದ್ದರಿಂದ ಜಾಸ್ತಿ ಗಲಾಟೆ ಆಗಲಿಲ್ಲ. ಅಷ್ಟರಲ್ಲಿ ಸಭೇನ ಮುಕ್ತಾಯ ಮಾಡಿದರು "

" ಹಾಗದರೆ ಆಕೆಯಿಂದ ಸಂಗೀತ...."

" ಹಾಡಿದರು ಸರ್. ಆದರೆ ಅವರು ಹಾಡಿದ ದೇವರನಾಮ...."

" ಶೌರಿ ! ಸ್ಪಷ್ಟವಾಗಿ ಹೇಳು ! ಶಶಿರೇಖಾ ಕೂಡ...."

" ಹೌದು ಸರ್ ಅದೇ ತೋಡಿರಾಗದ ' ಕಂಗಳಿದ್ಯಾತಕೋ ಕಾವೇರಿ ರಂಗನ ' ಪ್ರಾರಂಭಿಸಿದರು

ನನ್ನ ಬಾಯಿಂದ ಮಾತು ಹೊರಡಲಿಲ್ಲ.

ಶೌರಿ ಮುಂದುವರಿಸಿದ.

" ಆಮೇಲೆ ಶ್ರೀಕಂಠರಾಯರಿಗೂ ಶಶಿರೇಖಮ್ಮನವರಿಗೂ ವಿಪರೀತ ಬಿರುಸಿನ ಮಾತುಗಳಾದುವು ಸರ್. ಪ್ರಾಯಶಃ ಆಕೆ ಪುನಃ ಶ್ರೀಕಂಠರಾಯರ ಮುಖ ನೋಡೊಲ್ಲ"

" ಶೌರಿ ಇದರಲ್ಲಿ ಏನೋ ದಾಂಧಲೆ ನಡೆದಿದೆ. ಇಲ್ಲದಿದ್ದರೆ ಅದೇ ದೇವರ ನಾಮವನ್ನು ಇಷ್ಟೊ ಜನ ಏಕೆ ಹಾಡಬೇಕಾಗಿತ್ತು ಶೌರಿ ? "


" ಧಾಂಧಲೆ ಏನಿಲ್ಲ ಸರ್. ಪ್ರಾಯಶಃ ನನ್ನಿಂದ ಸ್ವಲ್ಪ ತಪ್ಪು ನಡೆದಿದೆ. ಸಭೆ ಶುರುವಾಗುಕ್ಕೆ ಮೊದಲು ಹರಿರಾಯರನ್ನ, ಪ್ರಾಣೇಶರಾಯರನ್ನ, ಶ್ರೀಕಂಠರಾಯರನ್ನ ಬೇರೆ ಬೇರೆಯಾಗಿ ಭೇಟಿ ಮಾಡಿ ಶಶಿರೇಖಮ್ಮನೋರು ಅದೇ ಹಾಡನ್ನು ಕೇಳಬೇಕಂತೆ ಅಂತ ಹೇಳಿದ್ದೆ ಸರ್. ಆಮೇಲೆ ನಮ್ಮ ಅಕ್ಕನ ಮನೆಯಿಂದ ಅವರು 25 ರೂಪಾಯಿ ವಸೂಲಿ ಮಾಡಿಕೊಂಡು ಬಂದ ಮೇಲೆ ಅವರನ್ನೂ ಭೇಟಿ ಮಾಡಿದೆ ಸರ್. ಶ್ರೀಕಂಠರಾಯರು ಆಕೆಯ ಕಂಠದಿಂದ ಆ ಹಾಡನ್ನು ಕೇಳ ಬಯಸುತ್ತಾರೆ ಅಂದೆ ಸರ್ "

" ಆಮೇಲೆ ! ? "

" ಸಧ್ಯ ಹಿಂದಿನವರು ಹಾಡುವಾಗ ಮುಂದಿನವರು ಕಾಫಿಗೆ ಹೋಗುತ್ತಿದ್ದರು ಸರ್. ಇದೆಲ್ಲಾ ಶ್ರೀಕಂಠರಾಯರು ಕೀಟಲೆ ಅಂತ ಶಶಿರೇಖಮ್ಮನವರಿಗೆ ಅನುಮಾನ ಬಂದಿದೆ ಸರ್. ಊಟ ತರಲೇ ಸರ್ ? "

" ಶೌರಿ ನಾಳೆ ಭಾಗೀರತೀ ಚಿಕ್ಕಮ್ಮನಿಂದ ನಿಂಗೆ ಐವತ್ತು ರೂಪಾಯಿ ಕೊಡಿಸ್ತೇನೆ. ಇಬ್ಬರಿಗೂ ಊಟಕ್ಕೆ ರೆಡಿಮಾಡು ಜೊತೇಲೇ ಕೂಡು" ಅಂದೆ ಭಕ್ತಿಯಿಂದ.

—" ಕೇಫ "



" ಸಂಜೀವರೆಡ್ಡಿ ಕಡೆಯೋರು ತನಿಕೆ ಮಾಡಕೆ ಮುಂಚೇನೆ ಶರಣಾಗತನಾಗೋಣ ಅಂತಿದಿನಿ"

— ಒಳ್ಳೇ ಫಜೀತಿ! —

" ಅಪ್ಪಾ ಅಪ್ಪಾ ಲೇದಿಯೋ ಚಾಪ್ ಬಾಗಲ್ ತೆಗ್ದಿದೇ "

" ನಿಧಾನವಾಗಿ ಬಾರೋ ಹಾಗೆ ಓಡಿಕೊಂಡು ಬಂದರೆ ಬಿದ್ದು ಹಲ್ಲು ಮುರಕೋತೀಯಾ ನೋಡು.

" ಅಪ್ಪ ...ಅಪ್ಪ ಲೇದಿಯೋ ಚಾಪ್ ಬಾಗಲ್ ತೆಗ್ದಿದೆ"

"ತೆಗೀಲಿ ಬಿಡು....ನಮ್ಮ ರೇಡಿಯೋ ಚಾಪಿನಲ್ಲಿಲ್ಲ. .. ಇಲ್ನೋಡು ಒಳಗಡೆ ರೂಮ್ನಲ್ಲಿದೆ ..."

" ಚಿವಣ್ಣ ಬಾಗಲ್ ತೆಗ್ದಿದಾರೆ....ಅಲ್ನೋದು ಅಪ್ಪಾ ಅಲ್ನೋದು."

" ಇರಲಿ ಬಿಡು....ಕಂಡಿದೀನಿ....ಇಲ್ನೋಡೇ ನಿನ್ನ ಪುತ್ರ ರತ್ನನ್ನ ...ನಾನು ಅವತ್ತು ರೇಡಿಯೋ ಕೆಟ್ಟು ಹೋದಾಗ ಶಿವಣ್ಣನ ಅಂಗಡಿಗೆ ರಿಪೇರಿಗೆ ಕೊಟ್ಟಿದ್ದೆನಲ್ಲ ಅದನ ನೋಡ್ಕೊಂಬಿಟ್ಟಿದಾನೆ ನೋಡು...."

"ಹೌದು ಆವಾಗ ನೀವು ಶಿವಣ್ಣನ ಅಂಗಡಿ ಬಾಗಲ್ ತೆಗೆದಿದೆಯೇ ಅಂತ ಬಾಗಿಲಲ್ಲಿ ನಿಂತು ಕತ್ತು ನೀಡುತ್ತಾ ಇದ್ದಿರೋ ಇಲ್ಲವೋ....ನೀವು ಬಿಟ್ಟರೂ ... ನಿಮ್ಮ ಕುಮಾರ ಆ ಕೆಲಸ ಬಿಡೊಲ್ಲ ಅಷ್ಟೆ....

" ಅಮ್ಮ ಚಿವಣ್ಣ ಬಾಗಲ್ ತೆಗ್ದಿದಾರೆ...."

" ತಿಳೀತು ಮರಿ ತಿಳೀತು ನೀನು ಹೋಗಿ ಆಟ ಆಡು....

" ಅಮ್ಮ ಲೇಡಿಯೋ ಚಾಪ್ ಬಾಗಲ್ ತೆಗ್ದಿದೆ"

" ಸಾಕೋ ಮರಿ....ಏನಾದರೂ ಹಿಡಕೊಂಡರೆ ಬಿಡೋದು ಗೊತ್ತಿಲ್ಲ ನಿಂಗೆ ....ಹೋಗಿ ಆಟ ಆಡು ನನ್ನ ಮುದ್ದು....ಚುಪ್....ಚುಪ್...."

" ಅಮ್ಮಾ ಅಮ್ಮಾ ...ಅಮ್ಮಾ..."

" ಮತ್ತೇನೋ ಮರಿ ಅಧ್ಭುತ ಕಂಡಿದ್ದು....ಮೆಲ್ಲಕ್ಕೆ ಬಾ ಬೀಳಬೇಡ"

" ಅಮ್ಮ....ಅಮ್ಮ....ಮಂಜನಾತ ಬಟ್ಟು ಬಂತು...."

" ಬರಲಿ ಬಿಡು....ನಿತ್ಯಾ ಬರತ್ತೆ....ಹೋಗತ್ತೆ"

" ಮಂಜನಾತ ಬಟ್ಟು ಬಂತು ನೋಡಮ್ಮಾ....ಬಾಮ್ಮಾ"

" ತಾತನ ತಿಂಡಿ ಕಟ್ಟು ಆಗಲೇ ಬಂದುಬಿಟ್ಟಿದೆ ಮರಿ....ಮೊನ್ನೆ ಬಸ್ಸಿನವನು ಕೊಟ್ಟು ಹೋದದ್ದಲ್ಲವೇ....ಇನ್ನು ಬಸ್ಸಿಗೆ ಕಾಯೋದು ಬೇಡ....ಇನ್ನೇನೂ ಬರೋಲ್ಲ...."

" ಅ....ಲ್ನೊಡಮ್ಮ ಬಚ್ಚು ಬರ್ತು ಇದೆ....ಓಗ್‌ಬಿಡತ್ತೆ ಈವಾಗ...."

" ಹೋಗಲಿ ಬಿಡೋ ಮರಿ....ಬಸ್ನಲ್ಲಿ ಏನೂ ಬರೊಲ್ಲ ಇವತ್ತು...."

" ಬಚ್ಚು ಬಂತು ಬಾಮ್ಮ"

" ಇರೋ ಸುಮ್ನೇ....ಒಂದು ದಿನ ಬಸ್ಸಿಗೆ ಕಾದು ನಿಂತಿದ್ದು ಕಂಡರೆ ಸಾಕು ನಿತ್ಯ ಬಸ್ಸು ಬಂದಕೂಡಲೇ ಚುರು ಹಚ್ಕೋತೀಯಲ್ಲ....ಯಾರು ನಿನಗೆ ಹೇಳೋವ್ರು....

" ಅಮ್ಮ ಬಚ್ಚು ನಿಂತಿದೆ....ಬಾಮ್ಮಾ"

" ಥೂ ಒಳ್ಳೇ ಫಜೀತಿಯಾಗ್ಹೋಯ್ತಲ್ಲ ನಿಂದು...."

—ರಾವಿ

ಬೇವು ಬೆಲ್ಲ

ಯಾವ ಆನಂದವನ್ನು ತರುವುದಕ್ಕಾಗಿ ಮಧುಮಾಸ ಬಂತೋ, ಭಗವಂತನೇ ಬಲ್ಲ! ನಾನಾವತಿ ಹಗರಣ, ಅಗದೀರ್ ಭೂಕಂಪ, ಲ್ಯಾಂಗಾ ನಾಂಗಾ ಕಗ್ಗೊಲೆಗಳು, ಚೌ ಎನ್ ಲೈ ಆಗಮನ, ಪಂಚಾಯ್ತಿ ಎಲೆಕ್ಷನ್ ಮರಬಿಸಿಲು ಉರಿಸೆಕೆ, ಧೂಳು, ತಿಗಣೆ ಸೊಳ್ಳೆಗಳ ಉತ್ಕರ್ಷ ಮೊದಲಾದುವುಗಳಿಂದ ಕಾಮದಹನವಾಗುವ ಈ ಹೊತ್ತಿನಲ್ಲಿ, ಹೊಗೆ ಗೂಡಿನಮೇಲೆ ಕುಳಿತು ಕೂಗುವ ಕೋಗಿಲೆಗೆ ಯಾವ ಹುಚ್ಚು ಹಿಡಿದಿತ್ತೋ ಅದೇಬಲ್ಲುದು! ಇದೇ ಸಮಯದಲ್ಲೇ ನನ್ನನ್ನು ಸತಾಯಿಸಬೇಕೆಂದು ಯಾವ ಯಾವ ಗ್ರಹಗಳು ಒಳಸಂಚು ಹೂಡಿದುವೋ, ವರಾಹಮಿಹಿರನೇ ಬಲ್ಲ! The fault dear Brutus, is not in our stars but in ourselves ; that we are underlings.

ಎಂದೋ ಒಂದು ದಿನ ಮೆಡಿಕಲ್ ಎಕ್ಸಾಮಿನೇರ್ಷ ಮಾಡಿಸಿ ಇನ್ಸೂರೆನ್ಸ್ ಡಿಪಾರ್ಟ್‌ಮೆಂಟಿಗೆ ಪ್ರಪೋಸಲ್ ಕಳಿಸಿದ್ದೆ. ಅದಕ್ಕೂ ಹಿಂದೆ 'ಈ ಕೊಂಪೆ ನನಗೆ ಬೇಡ, ನಗರಕ್ಕೆ ವರ್ಗಮಾಡಿ' ಎಂದು ಅರ್ಜಿ ಹಾಕಿದ್ದೆ. ಆ ಕರ್ಮದ ಮೊಟ್ಟೆ ಈಗ ಮರಿಯಿಟ್ಟಿದೆ. ಫೆಬ್ರವರಿಯಲ್ಲಿ ನಗರಕ್ಕೆ ವರ್ಗಾವಣೆ, ಮಾರ್ಚಿಯ ಆದಿಭಾಗದಲ್ಲೇ ಪಾಲಿಸಿಯ ನೀಡಿಕೆ.

ಐದನೇ ತಾರೀಖು ಮ್ಯಾನೇಜರು ಕರೆಸಿ ಸೈನ್ ಹಾಕಿಸಿ ಐವತ್ತು ರೂಪಾಯಿ ಕೈಗೆಕೊಟ್ಟರು. 'ನನ್ನ ಸಂಬಳಕ್ಕೆ ಇಂಥಾ ಅಧೋಗತಿಯೇ?' ಎಂದೆ.

"ಇದು ಕಲ್ಯಾಣರಾಜ್ಯ ನಿನ್ನ ಮಾಕ್ಸಿಮಂಸ್ಕೇಲಿಗೆ ಪ್ರೀಮಿಯಂ ಫಿಕ್ಸ್ ಮಾಡಿ ಹೋದ ಮಾರ್ಚಿಗೆ ಪಾಲಿಸಿ ಅಲಾಟ್‌ಮಾಡಿ ಅಲ್ಲಿಂದ ಇಲ್ಲಿವರೆಗೆ ಅರಿಯರ್ಸಿಗೆ ಹನ್ನೆರಡು ಇನ್ಸ್ಟಾಲ್‌ಮೆಂಟ್‌ಮಾಡಿ ರೆಗ್ಯುಲರ್ ಪ್ರೀಮಿಯಂ ಜೊತೆಗೆ ಅದನ್ನು add ಮಾಡಿ ಡಿಡಕ್ಟ್‌ಮಾಡಿದೆ" ಎಂದರು.

"ಅರ್ಥವಾಯಿತು!" ಎಂದೆ.

"ಏನು?"

"ಇವರಿಗೆ ಇದರ ರಕ್ಷಣೆಯ ಅವಶ್ಯಕತೆಯಿದೆ!"

"ಮತ್ಯಾಕೆ ವದ್ದಾಡುತ್ತೀ?"

"ನನಗೆ ಇಪ್ಪತ್ತೈದು ರೂಪಾಯಿಗಳ ಅವಶ್ಯಕತೆ ಇದೆ. ಉಗಾದಿ ಹಬ್ಬದ ಹೊತ್ತಿಗೆ ಈಗಿರುವ ನನ್ನ ಚಿಂದಿಗಳೆಲ್ಲಾ ತುಂಡಾಗುವ ನಿರೀಕ್ಷೆಯಿದೆ"

ಹೀಗೆಂದು ಸುಂಕದವರೆದುರು ಸುಖದುಃಖ ಹೇಳಿಕೊಂಡ ಮೂರ್ಖತನವನ್ನು ನನ್ನ ಮೇಲೆ ಆಪಾದಿಸಬೇಡಿ. ನನ್ನ ನಿಸ್ಸಹಾಯಕತೆ ನನ್ನನ್ನು ಹಾಗೆಮಾಡಿತು. ಅದಕ್ಕೆ ಇನ್ನೊಂದು ಕಾರಣವೂ ಇದೆ. ಆದರೆ ನಾನದನ್ನು ಯಾರಿಗೂ ಹೇಳುವುದಿಲ್ಲ. ಆಫೀಸಿನಿಂದ ಹೊರಹೊರಟೆ.

ಅಂತೂ ಈ ಕಲ್ಯಾಣರಾಜ್ಯದಲ್ಲಿ ಡಾಮರ್ ರೋಡಿನ ಅಕ್ಕಪಕ್ಕದ ಗಿಡಗಳೂ ಹಸುರಂಗಿ ತೊಟ್ಟು ಯುಗಾದಿಯ ಬಾಲಚಂದ್ರನೊಡನೆ ಆನಂದಿಸುತ್ತಾ ತಂಗಾಳಿಗೆ ತಲೆದೂಗಿ ಸಿನಿಮಾದಲ್ಲಿ ಹೇಳುವಹಾಗೆ 'ಪ್ಯಾರ್ ಕರ್‌ಲೋ'! ಎಂದು ಹಾಡುವಾಗ ನನ್ನ ಬೆನ್ನಿನಮೇಲೆ ಹರುಕುಚಿಂದಿಗೂ ಅಭಾವವಾಗುವುದು ನಿಶ್ಚಿತ ಎಂದುಕೊಂಡೆ.

ಆ ದಿನ ಬೆಳಗ್ಯೆಯಿನ್ನೂ ಪೇಪರ್ ನೋಡಿದ್ದೆ. ಅದರಲ್ಲೆಲ್ಲಾ ಬರೀ ಯುಗಾದಿಯ ಸುದ್ದಿಯೇ. ಕೈಮಗ್ಗದ ಬಟ್ಟೆಯ ಸಂಘದವರು ಯುಗಾದಿಯ ಆಚರಣೆಯನ್ನು ಕುರಿತು ಒಂದುಸಲಹೆ ಕೊಟ್ಟಿದ್ದರು.

ಯುಗಾದಿ ಸಂತೋಷದ ಹಬ್ಬ
ಕುಟುಂಬದ ಎಲ್ಲರೂ ಅಗ್ಗದರದ ಬಣ್ಣ ಬಣ್ಣ
ಅಂದವಾದ ಕೈಮಗ್ಗದ ಬಟ್ಟೆಗಳನ್ನೇ ಧರಿಸಿ
ಹಬ್ಬವನ್ನು ಹರಸಿರಿ

ಅದೊಂದೇ ಮಾರ್ಗವಲ್ಲ, ಮುಗಿಲುಹಳ್ಳಿ ಕಾಟನ್ ಕ್ಲಾತ್ಸ್ (M.C.C.) ಇನ್ನೊಂದು ಪಥನಿರ್ದೇಶನ ಮಾಡಿದ್ದರು.

ಯುಗಾದಿಯನ್ನು ಹೇಗೆ ಆಚರಿಸುವಿರಿ ?
ಆಗ ಢಕ್ಕಾಮಸ್ಲಿನ್ ಎನ್ನುತ್ತಿದ್ದರು,
ಈಗ ಮುಗಿಲುಹಳ್ಳಿ ಕಾಟನ್‌ಕ್ಲಾತ್ ಎನ್ನುತ್ತಿದ್ದಾರೆ.
ಗುಲಾಬಿ ಮಲ್ಲಿಗೆಗೆ ಹೇಳಿದಂತೆ—
'ಎಂ. ಸಿ. ಸಿ ಯ ಮುಂದೆ ನಾವು ಯಾವಗಿಡದ ತೊಪ್ಪಲು!'

ಹೌದು! ಬಟ್ಟೆ ತೋರದವರಿಗೆ ಬೆಳಕುಹಿಡಿಯಲು ಬೇಕಾದಷ್ಟು ಜನ. ಆದರೆ....ಆದರೆ ...ನಡೆಯುತ್ತಾ ನಡೆಯುತ್ತಾ ಬಜಾರಿಗೆ ಬಂದೆ. ಅಲ್ಲಿ ನನ್ನನ್ನು ಆಹ್ವಾನಿಸಲೆಂದೇ ಒಂದು ಬೋರ್ಡುಕಾದಿತ್ತು.

ಎಲ್ಲ ತರದ ಬಟ್ಟೆಗಳು
ಧೋತಿ, ಷರ್ಟಿಂಗ್ ಸೂಟಿಂಗ್
ಹತ್ತಿ, ರೇಷ್ಮೆ, ಉಣ್ಣೆ
ವೈವಿಧ್ಯ ಪೂರ್ಣಭರಪೂರ ಸಂಗ್ರಹ
Please peep in &
Be Barbered !!

ಒಳಕ್ಕೆ ನುಗ್ಗಿದೆ. ಅಂಗಡಿಯಮಾಲಕ ಛೇ, ದೇವತಾಮನುಷ್ಯ
'ಬನ್ನಿ ಸಾರ್ ಕೂತ್ಕೊಳ್ಳಿ ಏನುಬೇಕಾಗಿತ್ತು?' ಎಂದ
'ಎಂ. ಸಿ. ಸಿ.' ಎಂದು ಹೇಳಿದೆ.

'ಸೂಟಿಂಗ್ ತೋರಿಸಲೇ ಷರಿಟಿಂಗ್ಸ್ ತೋರಿಸಲೇ ಬುಷ್‌ಕೋಟಿಂಗ್ ಬೇಕೇ?' ಎಂದು ಕೇಳಿದ.

'ನನಗೆ ಅದೆಲ್ಲದರ ಅವಶ್ಯಕತೆ ಇದೆ!' ಎಂದೆ.

ಥಾನುಗಟ್ಟಲೆ ನನ್ನ ಮುಂದೆ ಪೇರಿಸಿದ. ಒಂದೊಂದೆ ಥಾನು ಬಿಚ್ಚಿ ತೋರಿಸಿದ. 'ಕಲರ್ ನೋಡಿಸಾರ್' ಎಂದ. 'ಡಿಸೈನ್‌ನೋಡಿ' ಎಂದ. 'ಟೆಕ್ಸ್ ಚರ್ ನೋಡಿ' ಎಂದ. 'ಹೈ ಕ್ಲಾಸ್ ಸಾರ್! ಎಂ. ಸಿ. ಸಿ. ಮುಂದೆ ಮ್ಯಾಂಚೆಸ್ಟರ್ ಕ್ಲೋತ್ ಏನೇನೂ ಇಲ್ಲಸಾರ್. ಅವರಿಗೆಲ್ಲಾ ಲಾಸ್ ಆಗ್ತಾ ಇದೆ. ನೋಡಿ ಸಾರ್ ಹೇಗಿದೆ ನೀವೇ ಹೇಳಿಸರ್!' ಎಂದ

"ನೋಡಿದೆ ಸರ್, ಚೆನ್ನಾಗಿದೆ ಮ್ಯಾಗ್ನಿಫಿಸೆಂಟ್! ಗುಲಾಬಿ ಮಲ್ಲಿಗೆಗೆ ಹೇಳಿದ್ದು ನಿಜ ಸರ್!'

'ಏನುಕೊಡ್ಲಿ ಸಾರ್'

"ಮೊದಲೇ ಹೇಳಿದ್ನೆಲ್ಲಾ ಎಂ. ಸಿ. ಸಿ. ಪ್ಯಾಂಟಿಗೆ ಬುಷ್‌ಕೋಟಿಂಗ್ ಒಂದೊಂದು ಜೊತೆಗೆ ಕೈಮಗ್ಗದ ಒಂದು ಸೀರೆ, ಧೋತಿ ಕೊಡಿ. ಅದು ಅಗ್ಗವಾಗಿ ಅಂದವಾಗಿ ಇರುತ್ತದೆ."

ಅವನು ಬಟ್ಟೆ ಹರಿದ; ಪ್ಯಾಕ್‌ಮಾಡಿದ.

'ಬಿಲ್ ಇಪ್ಪತ್ತೈದು ಮೇಲೆ ಹದಿನೆಂಟು ರೂಪಾಯಿ ಸರ್ ಕೊಡಿ' ಎಂದ.

"ಏನೆಂದಿರಿ ಇಪ್ಪತ್ತೈದು ಪ್ಲಸ್ ಹದಿನೆಂಟು ರೂಪಾಯಿ ಕೊಡಬೇಕೆ?"

"ಬಟ್ಟೆಬೇಕಾದರೆ ಕೊಡಬೇಕು ಸರ್!" ಎಂದ.

ಅವ, ಎಷ್ಟು ಒಳ್ಳೆಯವನು! ಮೊದಲೇ ಹೇಳಲಿಲ್ಲವೇ ನಾನು ಸಂಭಾವಿತ ಆ ಸಜ್ಜನನ ಮನಸ್ಸು ನೋಯಿಸಬಾರದೆಂದು ನನಗೂಇಷ್ಟ. ಆದರೆ ಸತ್ಯ ಹೇಳಲೇ ಬೇಕಾದುದು ನನ್ನ ಕರ್ತವ್ಯ.

"ದುಡ್ಡಿಲ್ವಲ್ಲ ಸಾರ್, ಬರ್‍ತೀನಿ!' ಎಂದು ಹೊರ ಹೊರಟೆ.

ನಾನು ಬಟ್ಟೆ ಅಂಗಡಿಗೆ ಈ ಹಿಂದೆ ಹೋದಾಗ, ಇನ್ನೂ ಸ್ಪುಟ್ನಿಕ್ ಹಾರುತ್ತಿರಲಿಲ್ಲ. ಆಗ ಹದಿನೆಂಟು ರೂಪಾಯಿ ಕೊಟ್ಟು ಪ್ಯಾಂಟಿಗ್, ಬುಷ್ ಷರ್ಟಿಂಗ್ ಕೊಂಡಿದ್ದೆ. ಅದು ಆದ ಈ ಮೂರು ವರ್ಷಗಳಲ್ಲಿ ಯಂತ್ರ ವಿಜ್ಞಾನ ಏನೇನನ್ನೋ ಸಾಧಿಸಿದೆ! ಲೂನಿಕ್ ಸೂರ್ಯನ ಸುತ್ತು ಹೊಡೆಯುತ್ತಿದೆ. ಮಾನವ ಕಲ್ಯಾಣರಾಜ್ಯ ಸ್ಥಾಪನೆಯತ್ತ ನಾಗಾಲೋಟ ಓಡುತ್ತಿದ್ದಾನೆ. (ನನ್ನ ಕಲ್ಯಾಣವೂ ಆಗಿದೆ) ಇಷ್ಟು ದಿನಕ್ಕೆ ಅವಶ್ಯಕ ವಸ್ತುಗಳ ಬಿಟ್ಟೀ ಹಂಚಿಕೆ ಮಾಡಬಲ್ಲ ಯಂತ್ರ ನಿರ್ಮಿತವಾಗಿದೆಯೋ ಏನೋ ಎಂದುಕೊಂಡಿದ್ದೆ. ಆಗ ಅಷ್ಟೇ ಆಗಿದ್ದರೇಟು ಈಗ ಇಷ್ಟಾಯಿತಲ್ಲ ಎಲ್ಲಿಂದತರಲಿ? ನಮ್ಮಪ್ಪ ದುಡ್ಡಿನ ಗಿಡ ಹಾಕಿದ್ದನೇ? ನಾನು ಕಳ್ಳನೇ? ನಾನೇನು ವಜ್ರಕಾಯನೇ? ಈಗಾಗಲೇ ದಿನಕ್ಕೆ ಹದಿಮೂರು ಗಂಟೆ ದುಡಿಯತ್ತಿದ್ದೇನೆ. ಇನ್ನೆಷ್ಟು ದುಡಿಯಲಿ?

ಬಟ್ಟೆ ಅಂಗಡಿಯಿಂದ ಹತ್ತೆಂಟು ಹೆಜ್ಜೆ ದೂರದಲ್ಲೇ ನನ್ನ ಪಾರ್ಟ್‌ಟೈಂ ಧಣಿಯುಮಂಡಿ ಅಂಗಡಿ ಇದೆ. ಉಸಿರುಗರೆದು ಅಲ್ಲಿ ಹೋಗಿ ಕುಳಿತೆ.

'ಎತ್ಲಗ್ಹೋಗಿದ್ಯೋ ಹಾಳಾಗಿ" ಎಂದು ಕೇಳಿದ ನನ್ನ ಪಾರ್ಟ್ಸ್ ಟೈಂಥಣಿ.

"ಹಿಂಗೇ ಇರ್ತ್ತಲ್ಹೋ ತಾಪತ್ರ" ಎಂದೆ.

"ಸರಿ ಬಿಡು, ಬರೀ ನಿನ್ತಾಪತ್ರನೇ ಹೊತ್ಕೊ ಎಂದಲೇ ನೀನು ನನ್ನಗ್ಗ ದುಡಿದ್ರು ಋಣಗೂಳ್ತಿಂತಿಯಲ್ಹೋ ಬಿಲ್ಲಿಕೆಲ್ಸ ಇಲ್ಲ."

"ನೀನ್ಹೊಡ ಸಂಬ್ಳಕ್ಕೆ ಇನ್ನೆಂಥ ಕೆಲ್ಸ ಕಡಿಯನೋ? ಜಿಗ್ಣಿಹೀರಿಥಂಗೆ ನನ್ರಕ್ತ ಹೀರಿ ಕೊಬ್ತಿಯಲ್ಹೋ. ತಡಿ ನಂ ಪಾರ್ಟಿ ಪವರಿಗೆ ಬರ್ಲಿ. ನಿಮ್ಗೆಲ್ಲ ಚೂರಿ ಹಾಕ್ಕೆಂತ ಚೌಕಿಪ್ಯಾಟಿಗೆ ನಿಂತ್ಗಂತಿನಲ್ಲಾ, ಆಗ ನನ್ಕೆಲ್ಸ ಎಂಥದು ಅಂತ ಗೊತ್ತಾಕ್ಕತೆ.

"ಯಾಕೊದ್ರತೀ, ತಾರು ಬಂದತೆ, ಮೊದ್ಲು ಉತ್ರಕೊಡು. ಅಲ್ಲಲೇ ರಾಯಾ ಕನಡದಗೆ ತಾರುಕೊಡಕ್ಕೆ ಬರಲ್ಲೇನೋ?"

"ಕೊಟ್ಹೋಡೋ ನನ್ಸಾಕಾರಾ—ಅದ್ರಮುಜಾನ"

ಈ ಮಧುರ ಬಾಂಧವ್ಯವನ್ನು ತನ್ನ ನೌಕರನೊಡನೆ ಇಟ್ಟುಕೊಂಡ ನನ್ನ ಈ ಪಾರ್ಟ್ಸ್‌ಟೈಂಥಣಿ ಹಿಂದೆ ನನ್ನ ಹಾಗೇ ಗುಮಾಸ್ತಿಕೆ ಮಾಡಿಕೊಂಡಿದ್ದವನು. ಇಬ್ಬರೂ ಒಂದೇ ಅಂಗಡಿಯಲ್ಲೇ ಇದ್ದವರು ಈಗ ಅವನಿಗೆ ಲಕ್ಕು ಎದೆಗೊದ್ದು ಬಂದು ಸಾಹುಕಾರಿಕೆ ಮಾಡುತ್ತಿದಾನೆ. ಹುಡುಗ ಧಾರಾಳಿ, ದುಡಿಯಲೂ ಬಲ್ಲ, ತಿನ್ನಲೂ ಬಲ್ಲ. ತನ್ನ ಅಂಗಡಿಯಲ್ಲಿ ಗ್ರ್ಯಾಜುಯೇಟಿ ಕೆಲಸ ಮಾಡುತ್ತಿದ್ದಾನೆ ಎಂಬ ಹೆಮ್ಮೆಗಾಗಿಯೇ ನನ್ನನ್ನು ಕೆಲಸಕ್ಕಿಟ್ಟುಕೊಂಡಿದ್ದಾನೆ.

ಸರಿ ಟೆಲಿಗ್ರಾಂ ಕೊಟ್ಟದ್ದಾಯಿತು. ಕಾಗದಗೀಗದ ಬರೆದದ್ದಾಯಿತು.

"ಯಾಕೋ ಇವತ್ತು ನಿನ್ಮುಖ ಹಿಂಗೈತೆ?" ಎಂದುಕೇಳಿದ.

"ಏನೂ ಅಂತ ಹೇಳ್ಕೆಂಬನಪ್ಪ ಉಗಾದಿ ಹಬ್ಬ ಬಂದತೆ ಒಂದುತುಂಡು ಹೊಸ್ಬಟ್ಟೆ ಇಲ್ಲ"

"ನಿಂಗೇನಾಗೆತೋ ಧಾಡಿ. ನಾಕ್ನಾಕ್ಹತ್ರದುಡಿತೀ? ಇಷ್ಟುವ್ಯಾಲೆ ಬಟ್ಗೀ ನಂತೆ ಊರ್ತುಂಬ ಅಂಗ್ಡಿ ಅದವೆ"

"ನಾಕ್ನಾಕ್ಹತ್ರ ಎಲ್ಡೆಲ್ಡ್ ಬಿಲ್ಲಿದುಡದ್ರಾತೇ? ಯಾಕ್ದುಡಿ ಬೇಕೋ? ನಿನ್ನಂಥ ಸವ್ಕಾರ್ರಿಗೆ ದುಡ್ಯದ್ರ ಬದ್ಲು "

"ಬಾರಲೇ ನಿಂಗೆಷ್ಟ ಬಟ್ಟೆಬೇಕೋ? ಅಂಗ್ಡಿಗ್ಹೋಗನ ಬಾ" ಎಂದು ಎಳೆದುಕೊಂಡು ಹೋದ.

ನಾವು ಹೋದಾಗ ಬಟ್ಟೆ ಅಂಗಡಿಯವನು ನನ್ನ ಪ್ಯಾಕನ್ನು ಬಿಚ್ಚುತ್ತಿದ್ದ. ನನ್ನ ಧಣಿ ಆ ಬಟ್ಟೆಗಳನ್ನು ನೋಡಿ

"ಇವಿರ್ಲಲೇ ನಂಗೆ; ನಂಗೆ ಬಟ್ಟೆ ಸೆಲೆಕ್ಷನ್ ಬರಲ್ಲ" ಎಂದು ಬಿಲ್‌ಕೊಟ್ಟು ಪ್ಯಾಕ್ ಹಿಡಿದುಕೊಂಡ

"ನೀನು ನೋಡ್ಕೈಳೋ ಇನ್ನು" ಎಂದ. ಅಷ್ಟರಲ್ಲೇ ಅಂಗಡಿಯ ಹಮಾಲ ಬಂದು.

"ಫೋನ್ ಬಂದತಣಾ" ಎಂದ.

"ಬಾರೋ ರಾಯಾ, ಸೋಮಾರ ನೋಡ್ಕೆಂಬನಂತೆ. ಸೋಮವಾರ ಅಂಗಡಿ

ಯಲ್ಲಿ ಭಾರೀರಷ್ನು, ಶನಿವಾರ ಹೋಗನ್ಬಿಡಲೇ" ಎಂದ ಶನಿವಾರ ಕೇಳಿದೆ. ' ಯಾಕ್ಬಡ್ಕಂತಿ ಬಿಡೋ ಮುಂದಿನ್ಶನಿವಾರ ಹೋಗನಂತೆ ' ಎಂದ.'

ಹೀಗಾಗಿ ಮಾರ್ಚ್, ಇಪ್ಪತ್ತೇಳು ದಿನ ಕಳೆದುಹೋಯಿತು ಬಿಸಿಲಿನ ಜ್ಯೊತಿ ನನ್ನ ವಸ್ತ್ರ ಚಿಂತೆಯೂ ಬಲಿಯಿತು. ಆ ದಿನ ಎಲ್ಲಾ ಕಾಗದಗಳನ್ನೂ ಬರೆದೆ. ಸಾಹುಕಾರ ತಲೆ ತಗ್ಗಿಸಿಕೊಂಡು ಸಹಿಹಾಕಿದ.

ಕೊನೆಯ ಕಾಗದಕ್ಕೆ ಸಹಿ ಹಾಕುವವೊದಲು ' ಓದಿನೋಡೋ ನನ್ಸಾಕಾರಾ' ಎಂದೆ. ಆ ಕಾಗದ ಹೀಗಿತ್ತು :

ಮುಗಿಲು ಹಳ್ಳಿ ಕಾರ್ಟ ಮಿಲ್ಸ್ ಲಿ., ಮತ್ತು ಕೈಮಗ್ಗದ ತಯಾರಕರ ಸಂಘಗಳಿಗೆ ನಾನು ಮಾಡುವ ನಮಸ್ಕಾರಗಳು.

ತರುವಾಯ ನಿಮ್ಮ ಪತ್ರಗಳಿಲ್ಲ ಬರೆಯಿರಿ. ನಿಮ್ಮ ಯೋಗಕ್ಷೇಮ ತಿಳಿಸಿ. ನನ್ನ ಮಕ್ಕಳಿಗೆ ಜೀವವಿಮೆಯ ಅವಶ್ಯಕತೆ ಇದೆ ಎಂಬುದನ್ನು ನೀವು ಅಲ್ಲಗಳೆಯ ಲಾರಿರಿ. ಆದುದರಿಂದಲೇ ಸುಖಸಂತೋಷದ ಹಬ್ಬವಾದ ಯುಗಾದಿಯನ್ನು ನಾನು ಆಚರಿಸಕೂಡದೆಂದು ನಮ್ಮ ಡಿಪಾರ್ಟ್‌ಮೆಂಟ್ ನಿರ್ಧರಿಸಿದೆ. ಗುಲಾಬಿಯ ಅಭಿಪ್ರಾಯವೇ ನನ್ನದಾದರೂ ನಿಮ್ಮ ಬಟ್ಟೆಗಳು ನನಗಲ್ಲ.

ನನ್ನ ಪಾರ್ಟ್‌ಟೈಂ ಧಣಿಯ ಸುದ್ದಿ ನಿಮಗೆ ತಿಳಿದಿರಲಿಕ್ಕಿಲ್ಲ. ಆತ ದೇವತಾ ಮನುಷ್ಯ. ಧಾರಾಳಿ. ಆದರೂ, ನಾನು ಈ ವರ್ಷದ ಯುಗಾದಿಯನ್ನು ನಿಮ್ಮ ಬಟ್ಟೆಗಳನ್ನುಟ್ಟು ಹಾಡಿ ಹರೆಸುವುದರ ಬಗೆಗೆ ಆತ ತಾಳಿರುವ ಧೋರಣಿ, ನೀತಿಗಳು ಖಂಡನೀಯ.

ಯಾರನ್ನೇಕೆ ಬೈಯಬೇಕು ? ವಿಧಿಯ ಬರೆಹವನ್ನು ಮೀರುವುದು ಅಸದಳ.
ಆದುದರಿಂದ ಮಿತ್ರರೇ ನನ್ನನ್ನು ಕ್ಷಮಿಸಿ.
ವಿಶ್ವಾಸ ಏಕರೀತಿ ಇರಲಿ ಇಂತಿ ನಮಸ್ಕಾರಗಳು
ನಾನು

ಧಣಿ ಓದಿದ. ' ನೀನೇನೂ ಸೈನು ಹಾಕಬೇಡ ' ಎಂದೆ.
ಅವನು ನಕ್ಕ. ಜೇಬಿನಿಂದ ಇಪ್ಪತ್ತು ರೂಪಾಯಿ ತೆಗೆದಕೊಟ್ಟ
' ಖರ್ಚು ಹಾಕು ' ಎಂದ. ನಾನು ನಗದೀಕಚ್ಚಾ ತೆಗೆದೆ.
೨೦-೦೦ ಸಾಹುಕಾರರು ಬಳಸಿದ ಖಾತೆಗೆಖರ್ಚು.
ಎಂದು ಬರೆದೆ.

ಆದರೇನು ? ಯುಗಾದಿಯ ದಿನ ನನ್ನ ಬೆನ್ಮೇಲೆ ಹರುಕಲು ಅಂಗಿಯೇ ಇತ್ತು. ಚಂದ್ರ ದರ್ಶನಕ್ಕೆ ಬುಷ್ ಷರ್ಟಂಗನ್ನು ತಲೆಗೆ ಪೇಟಾಸುತ್ತಿದ್ದೆ. ಯುಗಾದಿಯ ಮರುದಿನ ನಗದೀ ಕಚ್ಚಾ ನೋಡಿದ ನನ್ನ ಪಾರ್ಟ್‌ಟೈಂ ಧಣಿ.

" ಆದ್ರೂ ರಾಯರೇ ತಲೆ ಅಂದ್ರೆ ನಿಂದೋ ! " ಎಂದ.

" ತಗಂಡೇನ್ಮಾಡನೋ ಹಣೇಬರಹ ಸುಮಾರು " ಎಂದೆ.

—ಆ. ರಾ. ಸೇ.

ನಾಲಕ್ ಕಾಸ್ ತಗೊ-ನರಕಕ್ಕೆ ನಡಿ

"ಯಾರಯ್ಯ ನೀನು?"

"ಕೋಟೇಶ್ವರ ಸಾರ್"

"ಎಲ್ಲಿಂದ ಬಂದೆ?"

"ಭೂಲೋಕದಿಂದ ಸಾರ್"

"ಓಹೋ....ಕೋಟೇಶ್ವರನೋ ನೀನು?"

"ನಿಜ, ಸಾರ್... ಹತ್ಕೋಟಿ ದುಡಿದಿಟ್ಬಂದಿದೀನಿ"

"ಅದಕ್ಕೇನಾಗ್ಬೇಕು ಈವಾಗ?"

"ಹಿ....ಹಿ....ಹಿ.... ಸೊರ್ಗಕ್ಕೆ ಪ್ರವೇಶ ಬೇಕಿತ್ತು ಸಾರ್"

"ಓಹೋ ಸ್ವರ್ಗಕ್ಕೆ ಪ್ರವೇಶಾನೆ? ಸ್ವರ್ಗಕ್ಕೆ ಪ್ರವೇಶ ಸಿಗಬೇಕಾದಂಥ ಕೆಲಸ ನೀನೇನು ಮಾಡಿದೀಯ ಭೂಲೋಕದಲ್ಲಿ?"

"............"

"ಏನದು ಯೋಚ್ನೆ ಮಾಡ್ತಿದೀಯ?"

"ಇಲ್ಲ ಜ್ಞಾಪಿಸ್ಕೊಂತಿದೀನಿ ಸಾರ್....ಹಾಂ....ನೆನಪಿಗೆ ಬಂತು. ಒಂದು ದಿನ ಮಾರ್ಕೆಟ್ ರೋಡಿನಲ್ಲಿ ನನ್ನ ಕಾರು ಹಾಳಾಗಿ ನಿಂತುಬಿಟ್ಟಿತ್ತು. ಆಗ ಭಿಕ್ಷುಕರೆಲ್ಲ ಬಂದು ಮುತ್ತಿದರು. ಒಬ್ಬಳು ಮುದುಕಿಗೆ ಒಂದು ಬಿಲ್ಲೆ ಕೊಟ್ಟಹಾಗೆ ಜ್ಞಾಪಕ ಇದೆ ಸಾರ್"

"ಸರಿ...ಲೋ ಚಿತ್ರಗುಪ್ತಾ...ಇಲ್ನೋಡು ಈತ ಹೇಳೋ ಧರ್ಮ ಇವನ ಲೆಕ್ಕದಲ್ಲಿದೆಯೋ ನೋಡು"

"ಇದೆ ಸಾರ್....ಒಂದು ಸವಕಲ್ ಬಿಲ್ಲೆ ಈತನ ಲೆಕ್ಕದಲ್ಲಿ ಜಮಾ ಆಗಿದೆ"

“ ಸರಿ....ಇನ್ನೇನು ಧರ್ಮಕಾರ್ಯ ಮಾಡಿದೀಯ ಹೇಳು ”

“ .... ”

“ ಅದೇನು ಮತ್ತೆ ಅಷ್ಟೊಂದು ಯೋಚನೆ ? ”

“ ಸರಿಯಾಗಿ ನೆನಪೇ ಆಗ್ಲೊಲ್ದು ಸಾರ್.... ಕ್ಷಮಿಸಿ. ಈಗ ನೆನಪಿಗೆ ಬರುತ್ತೆ... ಬಹಳ ವರ್ಷಗಳ ಹಿಂದೆ ತಿರುಪತಿಗೆ ಹೋಗಿದ್ದೆ ಸಾರ್....ಅಲ್ಲಿ ಕೈಕಾಲಿಲ್ಲದ ಹೆಳವರೆಲ್ಲ ಬಂದು ಸುತ್ತುಗಟ್ಟಿ ನಿಂತರು. ಅವರಲ್ಲೊಬ್ಬ ನನ್ನ ಕಾಲೇ ಬಿಡಲೊಲ್ಲ. ಆವಾಗ ಆತನಿಗೆ ಒಂದು ಬಿಡುಗಾಸು ಕೊಟ್ಟು ಪಾರಾದ ಹಾಗೆ ಜ್ಞಾಪಕ ಸಾರ್ ”

“ ಹೌದೇನಯ್ಯ ಚಿತ್ರಗುಪ್ತ ? ”

“ ನಿಜಾ ಸಾರ್ ಲೆಕ್ಕದಲ್ಲಿದೆ....ಬಿಡುಗಾಸ್ ಹಾಗೆ ಕೊಟ್ಟಿದ್ದಿದೆ ಈ ಕೋಟೇಶ್ವರ ”

“ ಸರಿ .. ಇನ್ನೇನಾದರೂ ಇದೆಯೇನಯ್ಯ ? ”

“ ಅಷ್ಟೇ ಸಾರ್ ಜ್ಞಾಪಕದಲ್ಲಿರೋದು ”

ಇವನ್ನೇನು ಮಾಡೋದಪ್ಪ ಚಿತ್ರಗುಪ್ತ ”

“ ಮಾಡೋದೇನು....”

“ ಸೊರ್ಗಕೆ ಹೋಗ್ತೀನಿ ಸಾರ್ ”

“ ಈತ ಧರ್ಮ ಕೊಟ್ಟಿರೋ ಒಂದು ಬಿಲ್ಲೆ ಮತ್ತು ಒಂದು ಬಿಡುಕಾಸು ಇದೆಯಲ್ಲ.... ಅಷ್ಟನ್ನ ಹಿಂದಿರುಗಿ ಇವನಿಗೇ ಕೊಟ್ಟು ನರಕಕ್ಕೇ ತಳ್ಳೋಣ ಸಾರ್ ”

“ ಭೇಷ್ ಅದೇ ಸರಿ....ಹಾಗೆ ಆ ಕಡೆ ನಡಿಯಯ್ಯ ಕೋಟೇಶ್ವರ....ತಗೋ ನಾಲ್ಕು ಕಾಸು ನಡಿ ನರಕಕ್ಕೆ....”

—ರಾಮಿ.

ಗಾಂಪರ ಗುಂಪು

" ಅತಿಥಿ ದೇವೋ ಗಯ "

" ಚಲುವೆಯಾದ ಈ ಅಯೋಧ್ಯಾರಾಣಿಗೆ ತಕ್ಕ ಗಗನಸಖಿ ಈಕೆ "-ಎಂದೆಂದುಕೊಂಡರು ಗಾಂಪರೊಡೆಯರು, ಆಕೆ ಸೊಗಸಾದ ರಗ್ಗು ಡನ್‌ಲಪ್ ಪಿಲ್ಲೋ ಎಂಬ ರಬ್ಬರ್ ಸ್ಪಂಜಿನ ತಲೆದಿಂಬು ತಂದುಕೊಟ್ಟಾಗ. ಎಡಬದಿಗೆ ಮೇಲಿದ್ದ ದೀಪ ಹಚ್ಚಿದಳು—ತಣ್ಣನೆಯ ಗಾಳಿ ಕೊಳವಿಯ ಮೂತಿ ಗುರುಗಳ ಕಡೆ ತಿರುವಿದಳು. ಎಲ್ಲಕ್ಕೂ ಪ್ರತ್ಯೇಕವಾದ ಥ್ಯಾಂಕ್ಸ್ ಹೇಳಿದರು ಗಾಂಪರೊಡೆಯರು. ಇದ್ದಕ್ಕಿದ್ದ ಹಾಗೇ ಮತ್ತೆ ಅಯೋಧ್ಯಾರಾಣಿಯ ಧ್ವನಿವರ್ಧಕ " your attention pleace " ಎಂದು ಗಮನ ಸೆಳೆಯಿತು. ಗಂಡು ಗಗನಸಖನೊಬ್ಬ (steward) ಮಾಲೆಯಂತೆ ಒಂದು ವಿಚಿತ್ರ ರಬ್ಬರಿನ ಟ್ಯೂಬಿನ ಮಾಲೆ ಹಾಕಿಕೊಂಡು ಬಂದ.

—ಧ್ವನಿವರ್ಧಕ ಮತ್ತೆ ಹೇಳತೊಡಗಿತು. ಗಾಂಪರೊಡೆಯರೂ ಶಿಷ್ಯರೂ ಇದೇನು ಈ ವೇಷ—ಈ ಧ್ವನಿವರ್ಧಕದ ನದರಾಟಾ ಎಂದು ಕೇಳಿದರು.

" ಪ್ರಿಯ ಪ್ರಯಾಣಿಕ ಅತಿಥಿಗಳೇ—ದಯವಿಟ್ಟು ಗಮನಿಸಿ—ಇದೊಂದು ತಿಳಿಯಲೇ ಬೇಕಾದ ಮುಖ್ಯ ವಿಷಯ. ವಿಮಾನ ನೀರಿನ ಮೇಲೆ ಹಾರುತ್ತಿರುವಾಗ ಅಕಸ್ಮಾತ್ತಾಗಿ ಅಪಘಾತಕ್ಕೀಡಾದರೆ ನೀವು ಬಚಾವ್ ಆಗಲು ಈ ರಬ್ಬರು ರಕ್ಷಾಕವಚವನ್ನು ಉಪಯೋಗಿಸಿರಿ (Lifevest). ಆಕಸ್ಮಿಕವಾದ ಎಚ್ಚರಿಕೆ ಬಂದಾಗ ಶಾಂತವಾಗಿರಿ. ಕನ್ನಡಕ ಹಾಕಿದ್ದರೆ ತೆಗೆದುಬಿಡಿ—ಚೂಪಾದ ಚಾಕು—ಪೆನ್ಸಿಲ್-ಪೆನ್ನು ಇತ್ಯಾದಿಗಳನ್ನು ತೆಗೆದು ಬಿಸಾಕಿ—ನಿಮ್ಮ ನೆಕ್ ಟೈ—ಕಾಲರ್‌ಗಳನ್ನು ಸಡಿಲಪಡಿಸಿ—ಹೈಹೀಲ್ ಬೂಡ್ಸಿನವರಾದರೆ ಆ ಬೂಡ್ಸಿನಿಂದ ಬಿಡುಗಡೆ ಹೊಂದಿ—ನಿಮಗೊದಗಿಸುವ ಲೈಫ್‌ವೆಸ್ಟ್‌ಗಳನ್ನು ಧರಿಸಿರಿ - ಅದನ್ನು ಧರಿಸುವುದು ಹೀಗೆ ..."

—ಎಂದು ಲೈಫ್‌ವೆಸ್ಟ್ ಧರಿಸುವ ವಿಧಾನವನ್ನು ಪ್ರದರ್ಶಿಸುತ್ತಿದ್ದ ಗಗನಸಖನತ್ತ ಗಮನ ಸೆಳೆಯಿತು ಆ ಧ್ವನಿವರ್ಧಕದಿಂದ ಬರುತ್ತಿದ್ದ ಮಧುರ ಕಂಠ. ಗಾಂಪರ ಗುಂಪು ಯಾವುದೊ ಮುಂಬರುವ ಅಪಘಾತದ ನಾಂದಿಗೆ ಇದು ಪೀಠಿಕಾಪ್ರಕರಣವೆಂದು ಕತ್ತುಸೆರೆ ಉಬ್ಬಿಸಿಕೊಂಡು ಕಣ್ಣಲ್ಲಿ ನೀರು ತಂದುಕೊಳ್ಳುವುದರಲ್ಲಿದ್ದರು. ಮರಳನಂತೂ ಒಳಗೇ ನೊರ ನೊರ ಎಂದು ಮೂಗೆಳೆದುಕೊಂಡ. ಧ್ವನಿವರ್ಧಕ ಮತ್ತೆ ಹೇಳಿತು—

" ವಿಮಾನ ನೀರನ್ನು ಮುಟ್ಟಿದಾಗ ಎರಡುಬಾರಿ ಧಡ್ ಧಡ್ ಅನುಭವವಾಗುವುದು—ಆಮೇಲೆ ಶಾಂತವಾಗಿ ಈ ಲೈಫ್‌ವೆಸ್ಟನ್ನು ಊದಿ ಬಿರಿಟಿ ಹಾಕಿ ಹೊರಗೆ ಹೋಗಿ ನೀರಿಗಿಳಿಯಿರಿ....AIIನ ಅತಿಥಿಗಳೇ ಈ ಸಂದರ್ಭ ಬಂದೊದಗಲಾರದು—ಆದರೂ ನಿಯಮಾಳಿಯಂತೆ ಈ ಎಚ್ಚರಿಕೆಯ ಮಾಮೂಲು ಹೇಳಲೇಬೇಕಾದ್ದು.... ಇದು ಕೇವಲ ಜಾಗರೂಕರಾಗಿರಲು ಮುನ್ನೆಚ್ಚರಿಕೆ .. ನಿಮಗೆ ಸುಖಪ್ರಯಾಣವಾಗಲಿ "—ಎಂದು ಆ ಕೋಮಲ ಕಂಠಿ ಮಾತು ಮುಗಿಸಿದಳು.

" ಗುರುಗಳೇ—ಗುರುಗಳೇ "—ಎಂದ ಮರುಳ.

" ಏನು ಮರುಳಾ? "—

" ಒಂದು ಸಂದೇಹ ಬಂದಿದೆ—ಈ ವಿಮಾನ ಬರೀ ಆಕಾಶದಲ್ಲಿಯೇ ಅಲ್ಲದೆ ನೀರಮೇಲೂ ಹೋಗುತ್ತಿದೆಯೆ ?—"

" ಇದು ಹಡಗಲ್ಲ ಮರುಳಾ.."

" ಮತ್ತೆ ನೀರಿನ ಮೇಲೇಕೆ ಧಡ್ ಧಡ್ ಎಂದು ಇಳಿಯುವ ವಿಷಯ ಹೇಳಿದರು ? ತಿಳಿದು ತಿಳಿದೂ ಸಾಯಬೇಕೆ ? " ಅತ್ತ ಆ ಮರುಳ.

" ಈಗ ಅರಬ್ಬಿ ಸಮುದ್ರ ದಾಟುವಾಗ ಅಕಸ್ಮಾತ್ ಸಂಭವಿಸಿದರೆ ಹೀಗೆ ಹುಷಾರಾಗಿರಿ ಎಂಬ ಹುಷಾರಿ ಅಷ್ಟೆ ಮಗೂ" " ಸಂಭವ—ಗುರುಗಳೇ ಪರಮಾತ್ಮನ ಸಂಭವಾಮಿ ಯುಗೇ ಯುಗೇ ನೆನಪಿಗೆ ಬಂತು—ದೇವರ ಮೇಲೆ ಭಾರ ಹಾಕಿದರೆ ಭಯ ಕಡಿಮೆ ಆಗತ್ತಲ್ಲವೆ ? "

—ಎಂದು ಯುಗ ಯುಗಗಳಿಂದ ಮನುಷ್ಯನ ಅನಿಶ್ಚಿತ ಅಪಘಾತಗಳಿಗೆ ಆಸರೆಯಾಗಿರುವ ಈ ಗಾಂಪರ ಗುಂಪಿನ ಮೊರೆಗೂ ಓಗೊಡಬೇಕಾಯಿತು. ಈ ದುಃಖದಲ್ಲೂ ನಗೆ ಮೂಡಿದ್ದು ಗುಸುಗುಸು ಗಗನಸಖಿ ಪ್ರತಿಪಾಸಂಜೆರನ ಹತ್ತಿರವೂ ಏನೋ ಚೀಟಿ ತೋರಿಸಿ ಮಾತನಾಡಿಸುತ್ತಿದ್ದಾಗ.

ಬ್ರಿಸಸ್ಸಿನ ದೊರೆಸಾನಿಗೆ ಪಾವಿನ ಗಾಜಿನ ಬೋಟದಲ್ಲಿ ಪಾನೀಯವನ್ನು ತಂದಿತ್ತಳು. ಗಾಂಪರೊಡೆಯರು ಅದೇನಿರಬಹುದೆಂದು ಓರೆಗಣ್ಣಲ್ಲಿ ನೋಡಿದರು.

ಮೊದಲ ಗುಟುಕನ್ನು ಕುಡಿದಾಗ ನೋಡಬೇಕಿತ್ತು, ಅವಳ ಮುಖದಲ್ಲಿ ಮೂಡಿದ ಆನಂದದ ಹೊಳಪು. ಇಂತಹ ಗಂಟಲು ತಂಪು ಮಾಡುವ ಈ ಷರಬತ್ತು ಯಾವುದಿರಬಹುದು ಎಂದು ಗುರು ಗಾಂಪರು ಯೋಚಿಸುತ್ತಿದ್ದಂತೆ ಇವರ ಮುಂದೂ ಬಂದು ಚೀಟಿ ಬಂತು. " Would you like to have any drinks Sir " (ತಾವು ಯಾವುದಾದರೂ ಪಾನೀಯ ಬಯಸುತ್ತಿರಾ !) ಎಂದೂ ಕೇಳಿದಳು ಆ ಕೋಮಲಕಂಠಿ. ಆಕೆ ಕೇಳಿದ ವರಸೆ ಬಹು ಹಿತವಾಗಿತ್ತು. ಹಿಂದಿನ ಸೀಟದವರು ಸೊಗಸಾದ ಚುಟ್ಟ ಸೇದುತ್ತಿದ್ದರು. ಮುಂದಿನ ಪೀಠದಾತ ಸಿಗರೇಟು ಎಳೆಯುತ್ತಿದ್ದ.

ಪಕ್ಕದಾಕೆ ಪಾನೀಯ ಪೀಡಿತಳಾಗಿದ್ದಳು. ಇಡೀ ಪ್ರಯಾಣಿಕ ಗುಂಪೇ ಒಂದಲ್ಲ ಒಂದರಲ್ಲಿ ತಲ್ಲೀನರಾಗಿರುವಾಗ ತಾವೇಕೆ ಸುಮ್ಮನಿರಬೇಕು ?

"ನನಗೂ ಒಂದು ಗ್ಲಾಸು ಇದೇ ಷರಬತ್ತು ತಂದುಬಿಡಮ್ಮ ತಾಯಿ" —ಎಂದು ಬಿನ್ನವಿಸಿದರು ಗಾಂಪರೊಡೆಯರು. ಇವರ ಮುಂದೂ ಒಂದು ಗ್ಲಾಸು ಬಂತು—ಮಂಕ—ಮಡೆಯ—ಮರುಳ—ಮಡ್ಡಿ-ಮುರ್ಖಾಳರ ಮುಂದೂ ಗಿಲಾಸುಗಳು ಬಂದು ಕೂತವು. ಯತ್ರಗುರು ತತ್ರ ಶಿಷ್ಯ ಅಲ್ಲವೆ ?

ಅರ್ಧ ಲೋಟ ಕುಡಿದಮೇಲೆ ಇದೇನು ಹೀಗಿದೆಯಲ್ಲಾ ಎಂದು ಹಣೆ ನೆರಿಗೆ ಮಾಡಿಕೊಂಡರು—ಹುಬ್ಬು ಗೂಡಿಸಿದರು. ಶಿಷ್ಯರಿಗೆಲ್ಲಾ "ಹೋಲ್ಡಾನ್—ಡೋಂಕ್ ಡ್ರಿಂಕ್—ಇದು ಪಾನಕವಲ್ಲ—ರಾಮರಸ ಇದ್ದ ಹಾಗಿದೆ.–ಇದು ನಿಷೇಧ" ಎಂದು ಬ್ರೇಕ್ ಹಾಕಿದರು. ಕಲಿಯುಗದಲ್ಲಿ ಆಧುನಿಕ ರಾಮರಸವೇ ಪಾಮರಸ. ಹಿಂದೆ ಸೋಮಲತೆಯೆಂಬ ರಸವನ್ನು ಆರ್ಯರು ಕುಡಿದು ಆನಂದಪಡುತ್ತಿದ್ದರಂತೆ. ಸೋಮಲತೆಯಿಂದ ದ್ರಾಕ್ಷಾಲತೆಗೆ ಇಳಿದು ಈ ಈಚಲಮರಕ್ಕೆ ಹತ್ತಿ ಕೂತಿದೆ ಈ ರಸ ! ! ! ಹಿಂದೊಮ್ಮೆ ಗಾಂಪರಮಠ ಸೇರುವ ಮೊದಲು ಅಲಕ್ ನಿರಂಜನ್ ಫಕೀರ್ ಮಠದ ಮುಂದೆ ಬಳಲಿ ಬಿದ್ದಿದ್ದಾಗ ಆ ಮಠದವರು ಇದೇ ರುಚಿಯ ರಾಮರಸ ಬಾಯಿಗೆ ಸುರಿದು ಚೇತನ ತುಂಬಿದ್ದರು. ಈ ಪಾನಿಯವೂ ಅದೇ ರೀತಿಯಲ್ಲಿ ತಲೆ ಗುಯ್ ಗುಟ್ಟಿಸಿದಾಗ ಇದೂ ರಾಮರಸವೇ ಎಂದು ನಿರ್ಧಾರಕ್ಕೆ ಬಂದಿದ್ದರು ಗುರುಗಾಂಪರು.

ಆದರೆ ಆ ಶಿಷ್ಯವರ್ಗದ ಮಸಲತ್ತೇ ಬೇರೆ ಇದ್ದಂತೆ ತೋರಿತು. ಮರುಳ ಮುಖ್ಖಾಲು ಮುಗಿಸಿದ್ದ. ಮಡ್ಡಿ ಮುಗಿಸಿದ ಖಾಲಿ ಗ್ಲಾಸಿಗೆ ಮತ್ತೆ ಸುರುವಿಸಿಕೊಳ್ಳುತ್ತಿದ್ದ. ಗುರುಗಳಿಗೆ ಕೇರೇ ಮಾಡದೆ ಅವರವರುಗಳೇ ಮಾತಾಡಿಕೊಂಡರು.

"ಲೋ ಮಡ್ಡೀ ಬಲೇ ಮಜವಾಗಿದೆ ಕಣೋ"—ಮರುಳ.

"AII—Longlive"—ಮಡ್ಡಿ ಉವಾಚ.

"ಅಲ್ಲ ಕಣೋ ಮಂಕಾ—ಈ ಹಾರೋಪ್ಲೇನು ಏನೂ ಸುಖವಿಲ್ಲಮ್ಮ. ನೀನೇನೋ ಅನ್ನು ನಮ್ಮ ರೈಲ್ವೆ ಫರ್ಸ್ಟ್‌ಕ್ಲಾಸ್ ಬೋಗಿ ಯೋಗಿಗಳಾದ ನಮಗೆ ಅದರ ಮಜ ಅನುಭವಿಸಿದ ನಮಗೆ—ಇದು ಸಪ್ಪೆ ಕಣೊ."

"ಆ ರೈಲಿನಲ್ಲಿ ಈ ರಾಮರಸ ಕೊಡ್ತಾರೇನೋ ?"

"ಛಿ ಇದೆಲ್ಲ ಕುಡಿಬಾರ್ದಮ್ಮಾ—ನಮ್ಮ III ಕ್ಲಾಸ್ ಡಬ್ಬಿ ನೇರಿಸಿ ಆಗೋ ನೂಕು ನುಗ್ಗಲು—ಆ ತಲೆಮೇಲೇ ಹೊರೊ ಹಳದೀ ಥಮಾರ್ ಟ್ರಂಕುಗಳು—ಆ ಎಲೆ ಅಡಿಕೆ ಉಗಿತ -ಆ ಜಗಳ—ಕೈ ಕೈ—ಮಿಲಾವಣೆ—ಮತ್ತೆ ಕೆಲವೊಮ್ಮೆ ಸಿಗೋ

ರೈಲ್ವೆ ಪ್ರಯಾಣಿಕರ ಬುರುಡೆ ಕಥೆಗಳು—ಅದರ ಸೊಗಸೇ—ಸೊಗಸು—ಅದೇ ಜೀವನ ಕಣೋ—ಇದೆಲ್ಲಾ ಶ್ರೀಮದ್ಗಾಂಭೀರ್ಯದ ಕೃತಕ ದೊಡ್ಡಸ್ತಿಕೆ...."

"ಹೌದು ಕಣೊ—ಒಬ್ಬರೂ ಮಾತಾಡ್ದೆ—ಮಿಕಿಮಿಕಿ ಕಣ್ಣುಬಿಡ್ತಾ Yes, No, Thank you, Sorry, Excuse me, Pardon, Please, ಗಳನ್ನ ಉಚಾಯಿಸ್ತಾ ಇದ್ರೆ ಚೆನ್ನವೆ?"

"ಒಂದು ವಿಷಯ ನೋಡು—ಈ ವಿಲಾಯಿತಿ ಇಸಮುಗಳನ್ನ ಸೂಕ್ಷ್ಮವಾಗಿ ವೀಕ್ಷಿಸಿದರೆ—Please, Sorry, Excuse me, ಇವಿಷ್ಟು ಶಬ್ದಗಳನ್ನು ಚಮಕ್ಕಾಗಿ ಉಪಯೋಗಿಸಿದರೆ ಜಯಸಿದ್ಧ—"

"ಮಂಕಾ....ಆಯಮ್ಮನಿಗೆ ಹೇಳಿ ಇನ್ನೊಂದೊಂದು ವರಸೆ ಪಾನೀಯ ಏರಿಸಿಬಿಡೋಣಾ—ಮಾತೇ ಬಾರದ ಮೂದೇವಿ ಅಂಥಾ ನಾವು ಈ ಚೋಮರಸ ಬಿದ್ದ ಮೇಲೆ ಅಗದಿ ಶಹಗೇರ ಹಂಗೆ ಆಡಲಿಕ್ಕೆ ಹತ್ತೀನಿ....ಮತ್ತೆ ಮತ್ತೊಂದು ವಬ್ಬಿ ತರಸಲಾ...."

—ತಮ್ಮ ಶಿಷ್ಯವರ್ಗ ಈ ರೀತಿಯಲ್ಲಿ ಮಾತಾಡ ತೊಡಗಿದಾಗ ಗುರುಗಳಾದ ಗಾಂಪರೊಡೆಯರಿಗೆ ಏನೂ ತೋಚಲಿಲ್ಲ. ಅವರಿಗೂ ತಲೆ ರವಷ್ಟು ದಿಮ್ ಅಂದಿತ್ತು. ತಲೆ ಒರಸಿಕೊಂಡು ಪಕ್ಕದಲ್ಲಿದ್ದ ಬ್ರೇಸಸ್ ದೊರಸಾನಿಯನ್ನೇ ನೋಡ ತೊಡಗಿದರು. ಆ ದೊರಸಾನಿಯಾದರೋ ಇಡೀ ಎರಡು ಪೆಗ್ ವ್ಹಿಸ್ಕಿ ಹಾಕಿ ಬಿಟ್ಟಿದ್ದಳು. ಅವಳ ಕಣ್ಣೊ ಕೆಂಪಡರಿ ತಲೆ ಪದ ಹೇಳುತ್ತಿತ್ತು. ಹಾಗೇ ಅವಳು ಗಾಂಪರೊಡೆಯರನ್ನು ದಿಟ್ಟಿಸಿ ನೋಡಿ ಕತ್ತಿ ಹೊಡೆಸಿದ ಅವರ ಬೋಳುತಲೆಯನ್ನು ಸವರಿ—

"Really you have a Yel Brenner's Head" (ನಿಜಕ್ಕೂ ನಿನ್ನದು ಯಲ್ ಬ್ರೆನ್ನರ್ ತಲೆ) ಎಂದು ಪ್ರೀತಿಯಿಂದ ತಲೆ ತಟ್ಟಿದಳು. ಯಲ್ ಬ್ರೆನ್ನರ್ ಎಂಬ ಬೋಳುತಲೆ ಹಾಲಿವುಡ್ ನಟನನ್ನೇ ಕಂಡಂತೆ ಕುಣಿದಳು ಆ ಬ್ರೇಸಸ್ಸಿನ ದೊರೆಸಾನಿ. ಎದುರುಗಿನ ಗ್ಲಾಸು ಖಾಲಿ ಮಾಡಿ ಗುರುಗಳು ರಗ್ಗು ಎಳೆದು ನಿದ್ರೆ ಹೋದರು.

—ಎಲ್ಲ ದೀಪಗಳೂ ಆರಿದವು. ನಾಲ್ಕು ಎಂಜಿನ್ನುಗಳೂ ಭೋರ್ಗರೆಯುತ್ತಿದ್ದವು. ಕಿಟಕಿಯಲ್ಲಿ ನೋಡಿದರೆ ಮೇಲೆ ಲಕ್ಷ ನಕ್ಷತ್ರ - ಕೆಳಗೆ ಕತ್ತಲ ಗವಿ - ಹಾರಿ ಹಾರಿ ಸಾಗಿತ್ತು ಡೆಮಾಸ್ಕಸ್ ಕಡೆಗೆ ಅಯೋಧ್ಯಾರಾಣಿ. ಕಿವಿಗೆ ಹತ್ತಿ ತುರುಕಿ - ಗ್ಲಾಸುಗಳನ್ನು ಸರಿಸಿ ರಗ್ಗನ್ನು ಕತ್ತಿನ ತನಕ ಎಳೆದು ಆರಾಮಾಸನದಲ್ಲೇ ನಿದ್ರಾದೇವಿಯನ್ನಾಲಂಗಿಸಿದರು ಶಿಷ್ಯರುಗಳು. ಸಾಗಿತ್ತು ಒಂದೇ ಸಮ ಅಯೋಧ್ಯಾ ರಾಣಿ.

—ದಾಶರಥಿ ದೀಕ್ಷಿತ್

ತಲ್ಲಣಿಸದಿರು ಕಂಡ್ಯ

ತಲ್ಲಣಿಸದಿರು ಕಂಡ್ಯ ತಾಳು ಅಳಿಯ
ಎಲ್ಲರನು ಕಳುಹುವರು ಇದಕೆ ಸಂಶಯ ಬೇಡ

||ತಲ್ಲಣಿಸದಿರು....

ಹಳ್ಳಿಯಾ ಮೂಲೆಯಲಿ ಹುಟ್ಟಿರುವ ಹೈಕಳನು
ಎತ್ತಿತ್ತಿ ಫಾರಿನ್‌ಗೆ ನೂಕಿದವರಾರೋ
ಬಿರುದಾಂತ ಮಾವ ತಾ ಹೊಣೆಗಾರನಾಧ್ವಮೇಲೆ
ಅಳಿಯನನು ಕಳುಹುವನು ಇದಕೆ ಸಂಶಯಬೇಡ

||ತಲ್ಲಣಿಸದಿರು....

ಬೀದಿ ಅಲೆಯುತಲಿದ್ದ ಬಕ್ರಾಗಳೊಂದೆರಡ
ಇಂಗ್ಲೆಂಡು ರಶ್ಯಾಗೆ ದೂಡಿದವರಾರೋ ?
ಪಡೆದೆ ಡಿಗ್ರಿಯ ನೀನು ಮಾವ್ನ MO ಬಲದಿ
ಬಿಡದೆ ಕಳುಹುವನವನು ಸಂದೇಹಬೇಡ

||ತಲ್ಲಣಿಸದಿರು....

ಕ್ಲಾಸಿಲ್ಲದಿದ್ದರೂ ಕೋ ಎಂದು ಕರೆಕರೆದು
ಸ್ಕಾಲರ್‌ಶಿಪ್ಪನು ಕೊಡಿಸಿ ಕಳುಹುವರು ಬಾರೋ,
ಅದರ ಗುಟ್ಟೆಲ್ಲವನು ಬಲ್ಲನೈ ಮಾವರಾಯ
ಬೋಯಿಂಗ್‌ಗೆ ಹತ್ತಿಸುವ ಇದಕೆ ಸಂಶಯ ಬೇಡ

||ತಲ್ಲಣಿಸದಿರು....

(ದಾಸರಿಗೆ ನಮೋ ಎಂದು)

—ರಾಮಿ

ಅವರು ಹೇಳಿದ್ದೇ ಹಾಗೆ

ನಮ್ಮ ಸುಬ್ಬುಡು—ಥೆ ಸುಬ್ಬುಡು ಗೊತ್ತಿಲ್ಲವೇ ರಾಮ್‌ಚಿಕ್ಕಪ್ಪನ ಸದ್ಯ ಭಾವೈದ. ಅವನು ಮಹಾ ಕಿಲಾಡಿ-ಖದೀಮ-ಕೊರಮ. ಮುಂದವನು ರಾಜಕೀಯಕ್ಕೇ ಲಾಯಖು ಅಂತ ರಾಮ್‌ಚಿಕ್ಕಪ್ಪ ಆಗಲೇ ಹೇಳಿಬಿಟ್ಟಿದ್ದ. ಆದರೂ ಹುಡುಗ ಹ್ಯಾಗಂದ್ರೆ ಹಾಗೆ ಪೋಲಿದನದ ಹಾಗೆ ಅಲೆಯೋಕೆ ಬಿಡೋಕೆ ಆಗುತ್ಯೆ?

"ಸುಬ್ಬುಡು ಬೀಡಿ ಕುಡಿತಾನೆ"-ಅಂತ ಪುಕಾರು ಬಂತು. ರಾಮ್‌ಚಿಕ್ಕಪ್ಪ ಕಿಡಿಕಿಡಿಯಾಗಿ ಇದು ನಿಜವೇ ಕಂಡುಹಿಡಿ ಅಂತ ನನಗೆ ಹೇಳಿದ. ಈ ಮಹತ್ಕಾರ್ಯ ಸಾಧಿಸಿ ಆ ನನ್ನ ಸತಾಯಿಸುವ ಸುಬ್ಬುಡೂಗೆ ತಕ್ಕ ಶಿಕ್ಷೆ ರಾಮ್‌ಚಿಕ್ಕಪ್ಪನ ಬೆತ್ತದ ಮೂಲಕ ಕೊಡಿಸಬೇಕೆಂದು ಹೊರಟೆ.

ಸುಬ್ಬುಡು ಮಹಾ ಪುಡಾರಿ ಎಂದು ಆಗಲೇ ಹೇಳಿದೆನಷ್ಟೆ. ಇನ್ನು ಅವನು ಬೀಡಿ ಸಮೇತ ನನ್ನ ಕೈಗೆ ಸಿಕ್ಕಿಹಾಕಿಕೊಳ್ಳುತ್ತಾನೆಯೆ? ಜೋಟುದ್ದ ಪೋಕರಿ ನನ್ನ ಬಹು ಸತಾಯಿಸಿಬಿಟ್ಟ.

ಕಡೆಗೊಮ್ಮೆ ಸಿಕ್ಕುಬಿದ್ದ. ಯಜ್ಞಪ್ಪನ ಹೋಟಲು ಮೂಲೆ ಕೋಣೆಯಲ್ಲಿ ತದೇಕಚಿತ್ತನಾಗಿ ಬೀಡಿ ಎಳೆಯುತ್ತಿದ್ದ. ಗಬಕ್ಕನೆ ನುಗ್ಗಿ ಬೀಡಿ ಸಮೇತ ಅವನ ಎಡಗೈ ಹಿಡಿದೆ. ಷರ್ಲಾಕ್ ಹೋಮ್ಸಿನ ಕಳೆ ಇತ್ತು ನನ್ನ ಮುಖದಲ್ಲಿ.

"ಭಡವ ನಡಿ ರಾಮ್‌ಚಿಕ್ಕಪ್ಪನ ಹತ್ರ ಕದ್ದು ಬೀಡಿ ಕುಡೀತಿಯ ..."

"ರಾಮ್ ಚಿಕ್ಕಪ್ಪನೇ ಹೇಳಿದ್ದು...."

"ರಾಮ್ ಚಿಕ್ಕಪ್ಪನೇ ನನಗೂ ಹೇಳಿದ್ದು ಬೀಡಿ ಸಮೇತ ನಿನ್ನ ಹಿಡಿಯೋಕೆ-ನಡಿಯೋ ಮನೆಗೆ – ರಾಮ್‌ಚಿಕ್ಕಪ್ಪ ಬೀಡಿ ಸೇದೋಕೆ ಹೇಳಿದರೇನೂ"

"ಅಲ್ಲ ಕಣೋ – ಬೀಡಿ ತೊಗೊಂಡು ಬಾ ಅಂತ ಹೇಳಿದ್ದು....ಗೊತ್ತೋ."

"ಸುಳ್ಳಿಗೆ ಸುಳ್ಳು ಪೋಣಿಸಿ ಬೊಗಳಬೇಡ....ರಾಮ್ ಚಿಕ್ಕಪ್ಪ ಸಿಗರೇಟಲ್ಲೇನೋ ಸೇದೋದೂ ..."

"ಇನ್ಮೇಲೆ ಬೀಡೀನೆ ಸಾಕು ತೊಗೊಂಬಾ ಅಂದ್ರು. ನಾನೇನು ಸುಳ್ಳು ಹೇಳಲ್ಲ ...ಊಂ .. ಊಂ...."

"ನಿನ್ನ ನಿಜಕ್ಕೆ ಬೆಂಕಿಬಿತ್ತು....ಹೋಗಲಿ, ಬೀಡಿ ತೊಗೊಂಬಾಂದ್ರೆ ನೀನು ಅದನ್ನು ಹಚ್ಚಿದ್ದೆಯೇಕೋ ಬೇಕೂಫಾ ..."

"ಖಂಡಿತಾ ಕಣೋ ರಾಮ್ ಚಿಕ್ಕಪ್ಪನ್ನೇ ಕೇಳು....ಬೀಡಿ ಹಚ್ಕೊಂಡು **ತೊಗೊಂಬಾಂದ್ರು** ಕಣೋ ..."

—ಎಂದು ಕೈಸುಣಿಚಿಕೊಂಡು ಓಡೀಹೋದ ಸುಟ್ಟು ಸುಬ್ಬುಡು. ಹಾಗೇ ಡಂಗುಬಡಿದು ನಿಂತಿದ್ದೆ ಆ ಪುಡಾರಿಯು ಓಡಿದ ಕಡೆಗೇ ನೋಡುತ್ತ.

—ದಾಶರಥಿ ದೀಕ್ಷಿತ್


For 3 way Beauty Treatment....
RAJA
SNOW
AMLA HAIR OIL, KASTURI SOAP
MANYAM & CO BANGALORE MADRAS MADURAI BOMBAY

REG. NO. M. 4718 KORAVANJI SEPT. 1960.

Printed by B. S. Iyengar, Bangalore City.
Publisher—B. N. Gupta. Editor—M. Sivaram.